ಸಂಪುಟ : 9 ಸಂಚಿಕೆ 268 ಪುಟ : 4 ಬೆಲೆ: 3.00 ಗುರುವಾರ ಡಿಸೆಂಬರ್ 5 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 9 Issue : 268 Pages : 4 Price : 3.00 Thursday December 5 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

‘ಸಂತ ರಾಜಕಾರಣಿ ಶ್ರೀ ಡಿ.ಆರ್. ಪಾಟೀಲ’ ಗ್ರಂಥ ಬಿಡುಗಡೆ ಸಮಾರಂಭದಲ್ಲಿ ಕಂದಾಯ ಸಚಿವ ಕೃಷ್ಣ ಭೈರೇಗೌಡ ಅಭಿಮತ

# ಸೇವಾಕಾರಣದ ಕೊನೆಯ ಕೊಂಡಿ ಡಿ.ಆರ್. ಪಾಟೀಲ

■ವಿಜಯಸಾಕ್ಷಿ ಸುದ್ದಿ, ಗದಗ

ಡಿ.ಆರ್. ಪಾಟೀಲರಂಥಹ ಸಂತ ರಾಜಕಾರಣಿಯನ್ನು ರಾಜಕೀಯ ವ್ಯವಸ್ಥೆ ಗುರುತಿಸದಿದ್ದರೂ ಜನರು ಸದಾ ಅಂಥವರನ್ನು ಸ್ಮರಿಸುತ್ತಾರೆ. ಡಿ.ಆರ್. ಪಾಟೀಲರದ್ದು ಪರಿಪೂರ್ಣ ವ್ಯಕ್ತಿತ್ವ. ಸಾಮಾನ್ಯರಲ್ಲಿಯೇ ಸಾಮಾನ್ಯರು.



ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ನಾವು ಅವರಂತೆ ಆಗಲು ಸಾಧ್ಯವಿಲ್ಲ. ಕನಿಷ್ಠಪಕ್ಷ ಅವರಂಥ ಧೀಮಂತ ನಾಯಕರು ಭವಿಷ್ಯದ ರಾಜಕಾರಣಿಗಳಿಗೆ ಮಾರ್ಗದರ್ಶನ ಮಾಡಲಿ ಎಂದು ಕಂದಾಯ ಸಚಿವ ಕೃಷ್ಣ ಭೈ-ರೇಗೌಡ ಆಶಿಸಿದರು.

> ಡಿ.ಆರ್. ಪಾಟೀಲ ಆಧ್ಯಾತ್ಮ ಜೀವಿ. ರಾಜಕಾರಣದಲ್ಲಿ ನಾನು ಅವರಿಂದ ಅನೇಕ ವಿಷಯಗಳನ್ನು ಕಲಿಯಲು ಸಾಧ್ಯವಾಯಿತು. ಅವರ ಸಮಯ ಪ್ರಜ್ಞೆ ಇಂದಿನ ರಾಜಕಾರಣಿಗಳಿಗೆ ಮಾದರಿಯಾಗಿದೆ. ಇಂದಿನ ಯುವ ರಾಜಕಾರಣಗಳಿಗೆ ಡಿ.ಆರ್. ಪಾಟೀಲ ಮಾರ್ಗದರ್ಶನ ಅಗತ್ಯ.
>
> **– ಜಿ.ಎಸ್. ಪಾಟೀಲ.**
> **ರೋಣ ಶಾಸಕರು.**

ಬುಧವಾರ ನಗರದ ತೋಂಟ-ದಾರ್ಯ ಮಂಠದ ಆವರಣದಲ್ಲಿನ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳ ಶಿವಾನುಭವ ಮಂಟಪದಲ್ಲಿ, ಡಾ. ಎಂ.ಎಂ. ಕಲಬುರ್ಗಿ ಅಧ್ಯಯನ ಸಂಸ್ಥೆಯಿಂದ ಪ್ರಕಟವಾದ, ಜೆ.ಕೆ. ಜಮಾದಾರ ಸಂಪಾದಿಸಿದ ‘ಸಂತ ರಾಜ-ಕಾರಣಿ ಶ್ರೀ ಡಿ.ಆರ್. ಪಾಟೀಲ’ ಗ್ರಂಥ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಮಹಾತ್ಮ ಗಾಂಧೀಜಿ ಪ್ರಭಾವದಿಂದ ರಾಜಕಾರಣ ಜನಸೇವೆಗೆ ದಾರಿಯಾಗಿತ್ತು. ಕಾಲ ಬದಲಾದಂತೆ ರಾಜಕಾರಣದಲ್ಲಿ ಸೇವಾ ಕಾರಣ ಹೋಗಿ ಸ್ವಕಾರಣ ಮಾತ್ರ ಉಳಿದಿದೆ. ಸೇವಾಕಾರಣದ ಕೊನೆಯ ಕೊಂಡಿಯಾಗಿರುವ ಡಿ.ಆರ್. ಪಾಟೀಲ ಅವರಂಥವರನ್ನು ವಿಧಾನಸೌಧಕ್ಕೆ ತೆಗೆದುಕೊಂಡು ಹೋಗಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳಿದರು.

▸▸4ನೇ ಪುಟಕ್ಕೆ



> ದಿ. ಕೆ.ಎಚ್. ಪಾಟೀಲರು ಜನಸೇವೆ ಆಶಯ ಈಡೇರಿಸುವುದಕ್ಕಾಗಿಯೇ ಡಿ.ಆರ್. ಪಾಟೀಲ ತಮ್ಮ ಅರ್ಧ ಜೀವನವನ್ನು ಸವೆಸಿದರು. ಕೆ.ಎಚ್. ಪಾಟೀಲರ ಚುನಾವಣೆ ಸಂದರ್ಭದಲ್ಲಿ ಜಾತಿ ವಿಷಯ ಎದುರಾದಾಗ, ಡಿ.ಆರ್. ಪಾಟೀಲ ಪ್ರಯತ್ನದಿಂದ ಜಾತ್ಯಾತೀತವಾಗಿ ಮತ ಪಡೆಯಲು ಸಾಧ್ಯವಾಯಿತು. ರಾಜಕೀಯವಾಗಿ ಅವರ ಮಾರ್ಗದರ್ಶನ ಸಾಕಷ್ಟಿದೆ ಎಂದು ಎಚ್.ಕೆ. ಪಾಟೀಲ ಈ ಸಂದರ್ಭದಲ್ಲಿ ಸ್ಮರಿಸಿದರು.

ಡಿ. 15ಕ್ಕೆ ಸಿಎಂ ಸಿದ್ದರಾಮಯ್ಯ ರೋಣಕ್ಕೆ । ಕಾರ್ಯಕ್ರಮ ಯಶಸ್ವಿಗೊಳಿಸಲು ಶಾಸಕ ಜಿ.ಎಸ್. ಪಾಟೀಲ ಕರೆ

# ಕ್ಷೇತ್ರದ ಅಭಿವೃದ್ಧಿಗೆ 200 ಕೋಟಿ ರೂ ಅನುದಾನ

■ವಿಜಯಸಾಕ್ಷಿ ಸುದ್ದಿ, ರೋಣ

ರೋಣ ಮತಕ್ಷೇತ್ರದಲ್ಲಿ 200 ಕೋಟಿ ರೂಗಳ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಕಾಮಗಾರಿಗಳ ಉಧ್ಘಾಟನಾ ಸಮಾರಂಭಕ್ಕೆ ಮುಖ್ಯಮಂತ್ರಿ ಸಿದ್ದರಾಮ್ಯನವರು ರೋಣ ನಗರಕ್ಕೆ ಡಿ.15ರಂದು ಆಗಮಿಸಲಿದ್ದಾರೆ ಎಂದು ರಾಜ್ಯ ಖನಿಜ ನಿಗಮದ ಅಧ್ಯಕ್ಷ, ಶಾಸಕ ಜಿ.ಎಸ್. ಪಾಟೀಲ ಹೇಳಿದರು.



ಅವರು ಪಟ್ಟಣದ ಕಾಂಗ್ರೆಸ್ ಪಕ್ಷದ ಕಾರ್ಯಾಲಯದಲ್ಲಿ ಜರುಗಿದ ಕಾರ್ಯಕ್ರಮದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಡಿ.15ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಅನೇಕ ಸಚಿವರು ಆಗಮಿಸಲಿದ್ದು, ಕಾರ್ಯಕ್ರಮದ ಯಶಸ್ವಿಗೆ ಕಾರ್ಯಕರ್ತರು ಶ್ರಮಿಸಬೇಕು. ಮತಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ 200 ಕೋಟಿ ರೂ ಅನುದಾನವನ್ನು ತರಲಾಗಿದ್ದು, ಎಲ್ಲ ಅಭಿವೃದ್ಧಿ ಕಾರ್ಯಕ್ರಮಗಳ ಶಂಕುಸ್ಥಾಪನೆಯನ್ನು ಮುಖ್ಯಮಂತ್ರಿಗಳು ಸೇರಿದಂತೆ ಸಚಿವರು ನೆರವೇರಿಸಲಿದ್ದಾರೆ ಎಂದರು.

> ಕಾಂಗ್ರೆಸ್ ನೇತೃತ್ವದ ರಾಜ್ಯ ಸರಕಾರ ರಾಜ್ಯದ 1 ಕೋಟಿ 20 ಲಕ್ಷಕ್ಕೂ ಅಧಿಕ ಕುಟುಂಬಗಳಿಗೆ ಗ್ಯಾರಂಟಿ ಯೋಜನೆಗಳನ್ನು ತಲುಪಿಸಿದೆ. ಇದರಿಂದ ಬಡ ಕುಟುಂಬಗಳಿಗೆ ತಿಂಗಳಿಗೆ 5 ಸಾವಿರ ರೂಗಳವರೆಗೆ ಉಳಿತಾಯವಾಗುತ್ತಿದೆ. ಇದನ್ನರಿತ ನಾಡಿನ ಜನರು ಕಾಂಗ್ರೆಸ್ ಪಕ್ಷದ ಪರವಾಗಿ ನಿಂತಿದ್ದಾರೆ. ಮೊನ್ನೆ ನಡೆದ ಉಪಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳು ವಿಜಯ ಸಾಧಿಸಿರುವುದೇ ಸಾಕ್ಷಿ.
>
> **– ಸಂಗನಗೌಡ ಪಾಟೀಲ.**
> **ಪುರಸಭೆ ಸದಸ್ಯರು.**

ಹಿರಿಯ ಮುಖಂಡ ವ್ಹಿ.ಆರ್. ಗುಡಿಸಾಗರ ಮಾತನಾಡಿ, ಮುಖ್ಯಮಂತ್ರಿಗಳ ಕಾರ್ಯಕ್ರಮಕ್ಕೆ ಮತಕ್ಷೇತ್ರದಿಂದ 50 ಸಾವಿರಕ್ಕೂ ಹೆಚ್ಚು ಜನರು ಸೇರುವ ನಿರೀಕ್ಷೆಯನ್ನು ಹೊಂದಲಾಗಿದೆ. ಮತಕ್ಷೇತ್ರದಲ್ಲಿ ಗ್ಯಾರಂಟಿ ಯೋಜನೆಗಳ ಲಾಭವನ್ನು ಪ್ರತಿಯೊಂದು ಕುಟುಂಬಗಳು ಪಡೆಯುತ್ತಿದ್ದು, ಈ ಹಿನ್ನೆಲೆಯಲ್ಲಿ ಸಿಎಂ ಹಾಗೂ ಕಾಂಗ್ರೆಸ್ ಪಕ್ಷದ ಆಡಳಿತವನ್ನು ಮೆಚ್ಚಿ ಸ್ವಯಂ ಪ್ರೇರಿತರಾಗಿ ಜನರು ಆಗಮಿಸುತ್ತಾರೆ ಎಂದರು.

ಮುಖಂಡ ಯೂಸುಫ್ ಇಟಗಿ ಮಾತನಾಡಿ, ರಾಜ್ಯದಲ್ಲಿ ಬಿಜೆಪಿ ಹರಡುತ್ತಿರುವ ಸುಳ್ಳು ಪ್ರಚಾರಗಳಿಗೆ ರಾಜ್ಯದ ಜನರು ಕಿವಿ ಕೊಡುತ್ತಿಲ್ಲ. ಇದಕ್ಕೆ ಸಾಕ್ಷಿ ಎನ್ನುವಂತೆ ಇತ್ತೀಚೆಗೆ ಜರುಗಿದ ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಪಕ್ಷಕ್ಕೆ ಮತದಾರರು ತಕ್ಕ ಪಾಠ ಕಲಿಸಿದ್ದು, ಕಾಂಗ್ರೆಸ್ ಪಕ್ಷದ ಆಡಳಿತ ಜನರ ಮನವನ್ನು ಮುಟ್ಟಿದೆ ಎಂದರು.

ಈ ಸಂದರ್ಭದಲ್ಲಿ ವೀರಣ್ಣ ಶೆಟ್ಟರ, ಸಂಗನಗೌಡ ಪಾಟೀಲ, ಪ್ರಭು ಮೇಟಿ, ಪರಶುರಾಮ ಅಳಗವಾಡಿ, ವಿ.ಬಿ. ಸೋಮನಕಟ್ಟಿಮಠ, ಆನಂದ ಚಂಗಳಿ, ಸಂಗು ನವಲಗುಂದ, ಸೋಮು ನಾಗರಾಜ, ಇಸ್ಮಾಹಿಲ್ ಹೊರಪೇಟಿ, ನಾಜಬೇಗಂ ಯಲಿಗಾರ, ಎಸ್.ಎಚ್. ಸೋಂಪುರ, ಗೀತಾ ಮಾಡಲಗೇರಿ, ದುರ್ಗಪ್ಪ ಹಿರೇಮನಿ ಸೇರಿದಂತೆ ರೋಣ, ಗಜೇಂದ್ರಗಡ, ನರೇಗಲ್ಲ, ಡಂಬಳ ಹೊಬಳಿಗಳ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

> ನಾಡಿನ ಏಕೀಕರಣಕ್ಕಾಗಿ ಹೋರಾಟ ನಡೆಸಿದ ದಿ. ಅಂದಾನಪ್ಪ ದೊಡ್ಡಮೇಟಿಯವರ ಸ್ಮಾರಕ ಭವನ ನಿರ್ಮಾಣಕ್ಕೆ ಸಿಎಂ ಚಾಲನೆ ನೀಡಲಿದ್ದು, ಎರಡು ಎಕರೆ ಪ್ರದೇಶದಲ್ಲಿ ಮ್ಯೂಸಿಯಂ ಹಾಗೂ ಲೇಸರ್ ಶೋ ಮೂಲಕ ಮಹನೀಯರುಗಳ ಹೋರಾಟದ ಇತಿಹಾಸವನ್ನು ಇಂದಿನ ಪೀಳಿಗೆಗೆ ತಿಳಿಸಲಾಗುವುದು.
>
> **– ಜಿ.ಎಸ್. ಪಾಟೀಲ.**
> **ಶಾಸಕರು.**



## ಸಂಪಾದಕೀಯ

# ಜನಸಂಖ್ಯೆ ಹೊರೆಯಲ್ಲ, ಮಾನವ ಸಂಪನ್ಮೂಲ

ಭಾರತ ಜನಸಂಖ್ಯೆಯಲ್ಲಿ ಜಗತ್ತಿನಲ್ಲಿಯೇ ನಂಬರ್ 1 ರಾಷ್ಟ್ರವಾಗಿದೆ. ಜನಸಂಖ್ಯೆ ಬೆಳೆಯುತ್ತಿರುವ ವೇಗ ನೋಡಿದರೆ ಕೆಲವೇ ವರ್ಷಗಳಲ್ಲಿ ಜನಸಂಖ್ಯೆ 200 ಕೋಟಿ ದಾಟಿದರು ಅಚ್ಚರಿ ಪಡಬೇಕಾಗಿಲ್ಲ. ಆದರೆ ಈ ವೇಗ ಬಹಳ ವರ್ಷ ಇರುವುದಿಲ್ಲ ಎನ್ನುವ ಸಂಗತಿಯೊಂದು ಚಿಂತನೆಗೆ ಕಾರಣವಾಗಿದೆ.

ದೇಶದಲ್ಲಿ ಫಲವತ್ತತೆ ದರ ವರ್ಷದಿಂದ ವರ್ಷಕ್ಕೆ ಕುಸಿಯುತ್ತಿರುವುದು ಭವಿಷ್ಯದಲ್ಲಿ ಜನಸಂಖ್ಯೆ ಕಡಿಮೆ ಮಾತ್ರವಲ್ಲ, ಅನೇಕ ಸಾಮಾಜಿಕ ಸಮಸ್ಯೆಗಳಿಗೂ ಕಾರಣವಾಗಲಿದೆ. ಒಂದು ರಾಷ್ಟ್ರದ ಉತ್ತಮ ಫಲವತ್ತತೆ ದರ 2.1. ಅದಕ್ಕಿಂತ ಕಡಿಮೆಯಾದರೂ ಮತ್ತು ಹೆಚ್ಚಾದರೂ ಸಮಸ್ಯೆಯೆ. ಆದರೆ ಸದ್ಯ ಈ ಫಲವತ್ತತೆ ದರ 2.1ಕ್ಕಿಂತ ಕಡಿಮೆಯಾಗುವ ಸಾಧ್ಯತೆಯಿದೆ.

ಆ ಕಾರಣಕ್ಕಾಗಿಯೇ ಆರ್ ಎಸ್ ಎಸ್ ಮುಖ್ಯಸ್ಥ ಮೋಹನ ಭಾಗವತ್, ಭಾರತೀಯ ದಂಪತಿ ಕನಿಷ್ಠ ಮೂರು ಮಕ್ಕಳನ್ನು ಹೊಂದಬೇಕು ಎಂದಿರುವುದು. ಮೋಹನ ಭಾಗವತ್ ಅವರ ಹೇಳಿಕೆ ಅಂಧ ಭಕ್ತರು ಯಾವ ರೀತಿ ಸ್ವೀಕರಿಸುತ್ತಾರೊ ಗೊತ್ತಿಲ್ಲ. ಆದರೆ ನಿರ್ದಿಷ್ಟ ಸಮುದಾಯವನ್ನು ಗುರಿಯಾಗಿಸಿಕೊಂಡು ಮಾಡುತ್ತಿದ್ದ ಆರೋಪಗಳಿಗೆ ಮಾತ್ರ ತುಸು ಬ್ರೇಕ್ ಬೀಳುವುದಂತು ನಿಶ್ಚಿತ.

ಮಾಧ್ಯಮ ಸಂಸ್ಥೆಯೊಂದು ನಡೆಸಿದ ಅಧ್ಯಯನದ ಪ್ರಕಾರ ಭಾರತ ಎಲ್ಲ ಜಾತಿ, ಧರ್ಮಗಳ ಜನರ ಫಲವತ್ತತೆ ದರ ಕಡಿಮೆಯಾಗಿದೆ ಎನ್ನುವ ಅಂಶವನ್ನು ದಾಖಲಿಸಿದೆ. ಭಾರತದ ಸರಾಸರಿ ಫಲವತ್ತತೆ ದರ 2.1. ಅಂದರೆ ದೇಶದಲ್ಲಿ ಒಬ್ಬ ಮಹಿಳೆ 1 ಅಥವಾ 2 ಮಕ್ಕಳನ್ನೆ ಹೊಂದುತ್ತಿದ್ದಾರೆ.

ಈ ಹಿಂದಿನ ಕಾಲದಲ್ಲಿ 5-6 ಮಕ್ಕಳನ್ನು ಹೊಂದುತ್ತಿದ್ದ ದಂಪತಿ, ಇಂದು 1 ಅಥವಾ 2 ಮಕ್ಕಳನ್ನು ಹೊಂದುತ್ತಿದ್ದಾರೆ. ಒಂದೊಮ್ಮೆ ಫಲವತ್ತತೆ ದರ ಮತ್ತಷ್ಟು ಕಡಿಮೆಯಾದರೆ ದಂಪತಿ ಮಕ್ಕಳನ್ನು ಹೊಂದದೇ ಇರಬಹುದು. ಇಂಥ ಪರಿಸ್ಥಿತಿ ಎದುರಾದರೆ ಭಾರತಕ್ಕೆ ಜನಸಂಖ್ಯೆ ಕೊರತೆ ಎದುರಾಗಬಹುದು ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಸದ್ಯಕ್ಕೆ ಜನಸಂಖ್ಯೆ ಒಂದು ಸವಾಲು. ಜನಸಂಖ್ಯೆಗೆ ಅನುಗುಣವಾಗಿ ಸೌಲಭ್ಯಗಳನ್ನು ಕಲ್ಪಿಸುವುದು ಕಷ್ಟಸಾಧ್ಯ. ಜನಸಂಖ್ಯೆ ಏರುಗತಿಯಲ್ಲಿ ಇರುವವರೆಗೂ ಜನಸಂಖ್ಯೆ ಭಾರತಕ್ಕೆ ಸಮಸ್ಯೆಯೆ. ಆದರೆ ಇಳಿಕೆ ಆರಂಭವಾದರೂ ಸಮಸ್ಯೆಯೇ. ಹೀಗಾಗಿ ಸಮತೋಲನ ಕಾಪಾಡಿಕೊಳ್ಳಬೇಕು. ಸಮತೋಲನ ಕಾಪಾಡಿಕೊಳ್ಳಲು ಮೊದಲು ಜನಗಣತಿ ಆಗಬೇಕು. ದೇಶದಲ್ಲಿ ನಿಜವಾಗಿಯೂ ಎಷ್ಟು ಜನ ಇದ್ದಾರೆ ಎನ್ನುವ ಮಾಹಿತಿ ಆಧರಿಸಿ, ಭವಿಷ್ಯದ ಯೋಜನೆ ರೂಪಿಸಬೇಕಿದೆ.

## ಸದ್ದು-ಗದ್ದಲವಿಲ್ಲದೆ ಸಮಾಜಮುಖಿ ಸೇವೆಯ ಹಾದಿಯಲ್ಲಿರುವ ಭವಿಷ್ಯದ ನಾಯಕ ವಸಂತ ಪಡಗದ

# ಭರವಸೆಯ ಯುವ ನಾಯಕ



ವಸಂತ ಬಸಪ್ಪ ಪಡಗದ ಜೀವನದ ಹಿನ್ನೋಟ ಅರಿತಾಗ ಬಾಲ್ಯದಲ್ಲಿಯೇ ಪರಿಶುದ್ಧ ಮನಸ್ಸಿನೊಂದಿಗೆ ಗುರು ಪಂಡಿತ ಪುಟ್ಟರಾಜ ಕವಿ ಗವಾಯಿಗಳ ಜೀವನಾದರ್ಶಗಳ ಪರಿಪಾಲಕರಾಗಿ ಗದುಗಿನ ಪುಣ್ಯಭೂಮಿಯಲ್ಲಿ ಯುವಪಡೆಯೊಂದಿಗೆ ಬೆಳೆದವರು. ಗದಗ-ಬೆಟಗೇರಿ ನಗರದ ಪಡಗದ ಕುಟುಂಬದ ಬಸಪ್ಪ ಹಾಗೂ ನೀಲಮ್ಮ ಪಡಗದ ಅವರ ಪುತ್ರರಾಗಿ 5-12-1987ರಂದು ಜನಿಸಿದ ವಸಂತ ಪಡಗದ, ಒಕ್ಕಲಗೇರಿ ಓಣಿಯ ರೈತಾಪಿ ಪರಿಸರದಲ್ಲಿ ಬೆಳೆಯುತ್ತಾ ತಮ್ಮ ಕುಟುಂಬ ವ್ಯಾಪಾರ-ವಹಿವಾಟಿನಲ್ಲಿ ಬದುಕನ್ನು ಕಟ್ಟಿಕೊಂಡು ತಮ್ಮ ದೊಡ್ಡಪ್ಪನವರಾದ ನಗರಸಭೆಯ ಮಾಜಿ ಸದಸ್ಯ ನಿಂಗಪ್ಪ ಪಡಗದ ಅವರ ಮಾರ್ಗದರ್ಶನದಲ್ಲಿ ಬೆಳೆಯುತ್ತಾ, ವ್ಯವಹಾರಿಕ ವೃತ್ತಿಯನ್ನು ವೃದ್ಧಿಸುತ್ತಾ, ವಾಣಿಜ್ಯ ಪದವಿ ಪಡೆದು ತಮ್ಮ ನಡೆ-ನುಡಿಯೊಂದಿಗೆ ಯುವ ನಾಯಕರಾಗಿ ಹೊರ ಹೊಮ್ಮಿದವರು.

ದಕ್ಷನಾದವನಿಗೆ ಒಂದು ಸಮರ್ಥ, ನಿರ್ದಿಷ್ಟ, ಸ್ಪಷ್ಟ, ನಿಖರವಾದ ದೃಷ್ಟಿಕೋನ ಇರುತ್ತದೆ. ನಾಯಕನಾದವನ ಕಾರ್ಯ ಕ್ಷಮತೆಯೂ ದಕ್ಷತೆಯಿಂದ ಕೂಡಿರುತ್ತದೆ. ಸಾಮಾನ್ಯ ಮಿತಿಗಳನ್ನು ಮೀರಿದ ವ್ಯಕ್ತಿತ್ವ ಹೊಂದಿದವನು ಮಾತ್ರ ನಿಜವಾದ ಜನ ನಾಯಕನಾಗುತ್ತಾನೆ ಎಂಬ ನಿಲುವು ಯುವ ನಾಯಕ ವಸಂತ ಪಡಗದ ಅವರದು.

ಜನರ ಸೇವೆ ಮಾಡಲು ಅಧಿಕಾರವೇ ಬೇಕಿಲ್ಲ. ಇಚ್ಛಾಶಕ್ತಿ, ಸಾಮಾಜಿಕ ಮನೋಭಾವ ಇದ್ದರೆ ಸಾಕು. ಜೊತೆಗೆ ಕುಟುಂಬದ ಹಿರಿಯರು ಹಾಕಿಕೊಟ್ಟ ಪರಂಪರೆ ಮುನ್ನಡೆಸಬೇಕೆಂಬ ಹಂಬಲವೊಂದಿದ್ದರೆ ಸಮಾಜದಲ್ಲಿ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಬಹುದು. ಅಂತಹವರ ಸಾಲಿಗೆ ಸೇರುವ ಭವಿಷ್ಯದ ಭರವಸೆಯ ಯುವ ನಾಯಕರಾಗಿ ಕಾಣಿಸಿದ್ದಾರೆ ವಸಂತ ಪಡಗದ.

ವಸಂತ ಪಡಗದ ಹೆಸರೀಗ ಯುವ ಶಕ್ತಿಯೊಂದಿಗೆ ಎಲ್ಲೆಡೆ ಚಿರಪರಿಚಿತ. ಅಧಿಕಾರಕ್ಕಾಗಿ ಹಂಬಲಿಸಿದವರಲ್ಲ, ಸಮಾಜ ಸೇವೆ ಬಿಟ್ಟವರಲ್ಲ. ತಾವೇ ನಾಯಕರಾಗಿ ಬೆಳೆಯಬೇಕೆಂಬ ಹಂಬಲವೂ ಇಲ್ಲ. ಹಲವಾರು ಯುವ ನಾಯಕರಾದವರ ಹೆಗಲಿಗೆ ಹೆಗಲು ಕೊಟ್ಟು ಸಂಘಟನೆ ಮಾಡಿದವರು. ಇಂತಹ ಯುವ ನಾಯಕ ಯುವಕರ, ಸಮಾಜ ಸೇವಕರ, ಜನ ಸೇವಕರ ಕಣ್ಣಲ್ಲಿ ಭರವಸೆಯ ನಾಯಕರಾಗಿ ಹೊರ ಹೊಮ್ಮಿದ್ದಾರೆ.

ಗದಗ ಜಿಲ್ಲೆಯಲ್ಲಿ ಕಳೆದ 20 ವರ್ಷಗಳಿಂದ ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಪಕ್ಷ ಪಂಗಡವೆನ್ನದೆ ಉತ್ತಮ ಯುವ ರಾಜಕಾರಣಿಗಳ ಗೆಲುವಿಗೆ ಕಾರಣರಾಗಿರುವ ವಸಂತ ಪಡಗದವರು ನಗರಸಭೆಯ ಚುನಾವಣೆಗೆ ಸ್ಪರ್ಧಿಸಿ ತಮ್ಮ ಜನ ಬೆಂಬಲ ತೋರಿದವರು. ಕೋವಿಡ್ ಸಂಕಷ್ಟದ ಸಂದರ್ಭದಲ್ಲಿ ಸ್ನೇಹಿತರನ್ನು ಸಂಘಟಿಸಿ ಪ್ರತಿದಿನ ಆಹಾರದ ಕಿಟ್‌ಗಳನ್ನು ಅಸಹಾಯಕರಿಗೆ, ಬಡವರಿಗೆ ನಿರ್ಗತಿಕರಿಗೆ ವಿತರಿಸಿ ಬಡವರ ಹಸಿವು ನೀಗಿಸುವ ಪ್ರಯತ್ನ ಮಾಡಿದ್ದು ವಸಂತವರ ಸಮಾಜಮುಖಿ ಸೇವೆ ನಿಜಕ್ಕೂ ಮಾದರಿ.

ಸಂಘಟನೆ, ರಾಜಕಾರಣ ಕೆಲಸದ ಜತೆ ದೇಶಭಕ್ತಿಯ ಜಾಗೃತಿ ಮೂಡಿಸುವ ಮಹತ್ವದ ಕಾರ್ಯಗಳನ್ನು ಅವರ ಸ್ನೇಹಿತರೊಂದಿಗೆ ಮಾಡಿದ್ದಾರಲ್ಲದೆ, ಕಳಸಾ ಬಂಡೂರಿ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದವರು. ಮೊದಲಿನಿಂದಲೂ ಧಾರ್ಮಿಕ ಕಾರ್ಯಕ್ರಮಗಳಿಗೆ ಹೆಚ್ಚು ಉತ್ತೇಜನ ಕೊಟ್ಟ ಕುಟುಂಬದ ಹಿನ್ನೆಲೆಯ ವಸಂತ ಪಡಗದ ಧರ್ಮ ಕಾರ್ಯಗಳಲ್ಲಿ ಅತೀವ ಆಸಕ್ತಿಯೊಂದಿಗೆ ತಮ್ಮನ್ನು ತೊಡಗಿಸಿಕೊಂಡವರು.

ಗದಗ ಜಿಲ್ಲೆಯ ಪ್ರಸಿದ್ಧ ಹೋಳಿ ಹಬ್ಬದ ಸಂಭ್ರಮ ಇಮ್ಮಡಿಗೊಳಿಸಲು ಪ್ರೋತ್ಸಾಹ ಧನ ನೀಡುವ ಮೂಲಕ ಸಂಪ್ರದಾಯ, ಪರಂಪರೆ ಹಬ್ಬಗಳಿಗೆ ಬೆನ್ನೆಲುಬಾಗಿ ನಿಂತವರು. ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ರಾಜಕೀಯ ಸೇವೆಗಾಗಿ ತಮ್ಮ ಕುಟುಂಬದ ಸಹಕಾರದೊಂದಿಗೆ ಸ್ನೇಹಿತರ ಬಳಗ ಕಟ್ಟಿಕೊಂಡು ಸದಾಶಯದಲ್ಲಿರುವ ವಸಂತ ಪಡಗದ ಒಬ್ಬ ಅಪ್ಪಟ ಸಮಾಜಮುಖಿ ಸೇವೆಯ ಭವಿಷ್ಯದ ಯುವ ನಾಯಕ.

ಕ್ರಿಯಾತ್ಮಕ, ರಚನಾತ್ಮ ಯೋಜನೆಗಳಿಗೆ ಹೆಸರಾಗಿರುವ ವಸಂತ ಪಡಗದ ನವ ನವೀನ ಚಿಂತನೆಗಳಿಗೆ ಕನಸುಗಳಿಗೆ ಮಾದರಿಯಾದವರು. ಸಮಾಜದ ಕಟ್ಟಕಡೆಯ ಜನರ ಕೂಗಿಗೆ ಧ್ವನಿಯಾದವರು. ಯುವ ಸಮೂಹದೊಂದಿಗೆ ಹೊಸ ಬದಲಾವಣೆ ಕನಸು ಹೊತ್ತು ನಿಂತಿರುವ ವಸಂತ ಪಡಗದ ಜನಪರ ನಿಲುವುಗೆ ಸಾಕ್ಷಿಯಾದವರು.

ಸ್ವಾರ್ಥತೆ ಬಿಟ್ಟು ಸಾರ್ವತ್ರಿಕ ಸೇವೆ, ಸಾಮಾಜಿಕ ಚಿಂತನೆ. ಜಾತ್ಯಾತೀತ ನಿಲುವು, ಸರ್ವರೊಂದಿಗೆ ಒಡನಾಟ, ಬಡವರ ಕಲ್ಯಾಣ, ಜನಪ್ರೀಯ ಯೋಚನೆ, ಸೇವಾ ಜೇಷ್ಠತೆಯ ಆದರ್ಶ ಗುಣಗಳಿದ್ದರೆ ಜನರು ಅಪ್ಪಿ-ಒಪ್ಪಿಕೊಳ್ಳುವರೆಂಬದನ್ನು ವಸಂತ ಪಡಗದ ಬದುಕು ಸ್ಪಷ್ಟಪಡಿಸುತ್ತದೆ. ವಯಸ್ಸು ಕಿರಿಯದಾದರೂ ಉದಾತ್ತ ಚಿಂತನೆಯ ವಸಂತ ಪಡಗದ ಗದಗ ಜಿಲ್ಲೆಯೊಂದಿಗೆ ಉತ್ತರ ಕರ್ನಾಟಕದ ಸಾಮಾಜಿಕ ಹೋರಾಟಗಾರರಲ್ಲಿ ಯುವ ಶಕ್ತಿಯಾಗಿ ಗುರುತಿಸಿಕೊಂಡು ಸರ್ವರಲ್ಲಿ ಆಕರ್ಷಕರಾಗಿದ್ದಾರೆ.

ಕನ್ನಡಪರ ಸಂಘಟನೆಗಳೂ ಸೇರಿದಂತೆ ಹಲವಾರು ಸಾಮಾಜಿಕ ಸಂಘಟನೆಗಳು ಸೇರಿ ಕದಂಬ ಸೈನ್ಯ ಕಟ್ಟಿ ಕಾಯಕರ್ತರ ಪಡೆಯನ್ನು ಹುಟ್ಟು ಹಾಕಿದ ವಸಂತ ಪಡಗದವರ ನಾಯಕತ್ವ ಬೆಳವಣಿಗೆಗೆ ಇನ್ನಷ್ಟು ಪುಷ್ಠಿ ನೀಡಿತು. ಅತ್ಯಂತ ದಕ್ಷತೆಯಿಂದ, ಪ್ರಾಮಾಣಿಕತೆಯಿಂದ, ಯಾವುದೇ ಕಪ್ಪುಚುಕ್ಕೆಯಿಲ್ಲದೆ ಸಾಮಾಜಿಕವಾಗಿ ಬೆಳೆಯುತ್ತಾ ಹಂತ-ಹಂತವಾಗಿ ಮೇಲ್ಮಟ್ಟಕ್ಕೇರಿದ ವಸಂತ ಪಡಗದ ಸೇವೆ ಇನ್ನಷ್ಟು ಮತ್ತಷ್ಟು ಸಮಾಜಕ್ಕೆ ಅಗತ್ಯವಾಗಿದೆ.

ಪ್ರತ್ಯೇಕ ಉತ್ತರ ಕರ್ನಾಟಕದ ಕೂಗನ್ನು ಎತ್ತಿದವರು. ರೈತ ಮುಖಂಡರೊಂದಿಗೆ ದೆಹಲಿ ಚಲೋ ಹಮ್ಮಿಕೊಂಡು ದೆಹಲಿಯ ರಾಮಲೀಲಾ ಮೈದಾನ ಹಾಗೂ ಇಂಡಿಯಾ ಗೇಟ್ ಬಳಿ ಮೌನ ಪ್ರತಿಭಟನೆ ನಡೆಸಿ ಕೇಂದ್ರ ಸರಕಾರದ ಗಮನ ಸೆಳೆದು ಕೇಂದ್ರ ನಾಯಕರು ಮಹದಾಯಿ ಸಮಸ್ಯೆಗೆ ಸ್ಪಂದಿಸುವಂತೆ ಒತ್ತಾಯಿಸಿದವರು.

ಕೇಳಿ ಕೊಡುವ ನೂರಾರು ಬಹುಮಾನಗಳಿಗಿಂತ ಕೇಳದೇ ಕೊಡುವ ಗೌರವ ಬಹಳ ದೊಡ್ಡದು ಎಂಬುದಕ್ಕೆ ವಸಂತ ಪಡಗದ ಮುಂಚೂಣಿಯಲ್ಲಿದ್ದಾರೆ. ಜನಾಕರ್ಷಕ ವ್ಯಕ್ತಿತ್ವದ ಭರವಸೆಯ ನಾಯಕ ವಸಂತ ಪಡಗದ ಸಾಮಾಜಿಕ, ರಾಜಕೀಯ ಕನಸು ನನಸಾಗಲಿ ಎಂಬುದು ಅವರ ಅಭಿಮಾನಿಗಳ ಹಂಬಲವಾಗಿದೆ.

ವಸಂತ ಪಡಗದವರ 37ನೇ ಹುಟ್ಟುಹಬ್ಬವನ್ನು ಅವರ ಅಭಿಮಾನಿ ಬಳಗವು ಸಮಾಜಮುಖಿ ಸೇವಾ ಕಾರ್ಯಗಳೊಂದಿಗೆ ಆಚರಿಸುತ್ತಿರುವುದು ನಿಜಕ್ಕೂ ಹೆಮ್ಮೆ, ಅಭಿಮಾನವೆನಿಸುತ್ತಿದೆ.

**- ಪ್ರವೀಣಕುಮಾರ ಮಾಂತಾ.**

# ಕೇಂದ್ರದ ಕೈಗೊಂಬೆ ಆಗಿರುವ "ಇಡಿ" ಸೀಳು ನಾಯಿ ಇದ್ದಂತೆ: ಸಚಿವ ಕೃಷ್ಣ ಬೈರೇಗೌಡ ಕಿಡಿ!

**■ವಿಜಯಸಾಕ್ಷಿ ಸುದ್ದಿ, ಗದಗ**



ಜಾರಿ ನಿರ್ದೇಶನಾಲಯ ಒಂದು ಸೀಳು ನಾಯಿ, ಅದು ವಿಚ್ ಹಂಟಿಂಗ್ ಏಜೆನ್ಸಿ ಎಂದು ಹೇಳುವ ಮೂಲಕ ಕಂದಾಯ ಸಚಿವ ಕೃಷ್ಣ ಬೈರೇಗೌಡರು ಹರಿಹಾಯ್ದಿದ್ದಾರೆ.

ಇಡಿ ಅಧಿಕಾರಿಗಳು, ಮುಡಾ ಸೈಟ್ ಹಂಚಿಕೆಯಲ್ಲಿ ಭಾರಿ ಹಗರಣ ಪತ್ತೆ ವಿಚಾರವಾಗಿ ಗದಗನಲ್ಲಿ ಮಾತನಾಡಿದ ಸಚಿವರು, ಕೇಂದ್ರದ ಕೈಗೊಂಬೆ ಆಗಿರುವ ಇಡಿ ಸೀಳು ನಾಯಿ ಇದ್ದಂತೆ. ಇಡಿ ಎನ್ಸಪೋರ್ಸ್‌ಮೆಂಟ್ ಡೈರೆಕ್ಟರೇಟ್ ಅಲ್ಲ. ಅದು ರಾಜಕೀಯ ವಿಚ್ಟೇಟಿಂಗ್ ಏಜೆನ್ಸಿ. ವಿರೋಧ ಪಕ್ಷಗಳನ್ನು ಟಾರ್ಗೆಟ್ ಮಾಡೋದು. ವಿಪಕ್ಷ ನಾಯಕರ ಬಲಿ ಹಾಕೋದೇ ಇಡಿ ಕೆಲಸ.

ದೇಶಗಳಲ್ಲಿ ಇಲ್ಲಿಯವರೆಗೆ ಯಾರ್ಯಾರ ಮೇಲೆ ಕೇಸ್ ಹಾಕಿದ್ದಾರೆ. ಬರೀ ರಾಜಕೀಯ ವಿರೋಧಿಗಳ ಮೇಲೆ ಮಾತ್ರ ಕೇಸ್ ಹಾಕಿದ್ದಾರೆ. ಶ್ರೀಮಂತರ ಮೇಲೆ, ಬ್ಲ್ಯಾಕ್ ಮನಿ ಕೇಸ್ ಹಾಕಿದ್ದಾರಾ?ಸ್ವಿಸ್ ಬ್ಯಾಂಕ್ ನಲ್ಲಿ ಹಣ ಇಟ್ಟವ್ರ ಮೇಲೆ ಕೇಸ್ ಹಾಕಿದ್ದಾರಾ!? ಅಂತ ಪ್ರಶ್ನೆ ಮಾಡಿದರು. ಇಡಿ ಬಿಜೆಪಿ ಅಂಗಸಂಸ್ಥೆಯಾಗಿದೆ. ಈ ಅಂಗಸಂಸ್ಥೆ ಕೆಲಸ ರಾಜಕೀಯ ವಿರೋಧಿಗಳ ಬಲಿ ಹಾಕೋದು.. ಇಡೀ ದೇಶದಲ್ಲಿ ಅವ್ರು ಅದೇ ಮಾಡಿದ್ದಾರೆ ಅಂತ ಸಚಿವರು ಆಕ್ರೋಶ ಹೊರ ಹಾಕಿದ್ದಾರೆ.

ಎಲ್ಲೆಲ್ಲಿ ವಿರೋಧ ಪಕ್ಷಗಳು ಇವೆ. ಪಶ್ಚಿಮ ಬಂಗಾಳ, ತಮಿಳು ನಾಡು, ಕೇರಳ, ದೆಹಲಿ, ಪಂಜಾಬ್, ಛತ್ತಿಸಗಢ ಎಲ್ಲ ಕಡೆ ವಿಪಕ್ಷಗಳ ಮೇಲೆ ಕೇಸ್ ಹಾಕಿದ್ದಾರೆ. ಇಲ್ಲಿಯವರೆಗೆ ಇಡಿ ಎಷ್ಟು ಕೇಸ್ ಹಾಕಿದೆಯೋ 90 ರಷ್ಟು ವಿರೋಧ ಪಕ್ಷಗಳ ಮೇಲೆ ಹಾಕಿದ್ದಾರೆ. ಹಾಕಿರೋ ಕೇಸ್ ನಲ್ಲಿ ಶೇಕಡಾ 1.5 ರಷ್ಟು ಮಾತ್ರ ಶಿಕ್ಷೆ ಆಗಿದೆ. ಅದರಲ್ಲಿ 99 ಕೇಸ್ ಗಳು ಕನ್ವಿಷನ್ ಮಾಡಲು ಆಗಿಲ್ಲ. ಇಡಿ ಕೆಲಸ ಬರೀ ರಾಜಕೀಯ ವಿರೋಧಿಗಳಿಗೆ ಹಿಟ್ ಅಂಡ್ ರನ್ನ ಮಾಡೋದು ಎಂದರು. ಇನ್ನೂ ರಾಜ್ಯದ ಉಪ ಚುನಾವಣೆಯಲ್ಲಿ ಮೂರು ಸ್ಥಾನ ಗೆದ್ದ ಮೇಲೆ ಬಿಜೆಪಿಗೆ ಸಹಿಸೋಕೆ ಆಗ್ತಿಲ್ಲ. ಅದಕ್ಕೆ ಇಡಿ ಅನ್ನೋ ಸೀಳು ನಾಯನ್ನು ಬಿಟ್ಟಿದ್ದಾರೆ. ದೇಶದಲ್ಲಿ ಇಡಿ ಒಬ್ಬ ಬಿಜೆಪಿ ಮೇಲೆ ಕೇಸ್ ಹಾಕಿದೆಯಾ!? ಬ್ಲ್ಯಾಕ್ ಮನಿ ಮಾಡಿದ ಒಬ್ಬ ಶ್ರೀಮಂತರ ಮೇಲೆ ಕೇಸ್ ಹಾಕಿದ್ದಾರಾ ಅಂತ ಪ್ರಶ್ನೆ ಮಾಡಿದರು. ಬರೀ ರಾಜಕೀಯ ವಿರೋಧಿಗಳ ಮೇಲೆ ಕೇಸ್ ಹಾಕ್ತಿದ್ದರೆ. ಅದು ನೀವು ನಮ್ಮನ್ನ ಕೇಳಿದ್ರೆ ನಾನೇನು ಹೇಳಲಿ. ಇದು ಪೊಲಿಟಿಕಲ್ ಅಟ್ಯಾಕ್. ಬಿಜೆಪಿ ಸೋತು ನಿರಾಸೆಯಾಗಿ ಇಡಿಯನ್ನು ಛೋ ಬಿಟ್ಟಿದೆ. ಅವ್ರನ್ನ ಲೀಗಲ್ ಆಗಿ ಎದುರಿಸುತ್ತೇವೆ. ಜನತಾ ನ್ಯಾಯಾಲಯದಲ್ಲೂ ಪ್ರಜಾಪ್ರಭುತ್ವ ಮುಖಾಂತರ ಎದುರಿಸುತ್ತೇವೆ. ಅವ್ರದ್ದು ಎಲ್ಲಾ ಭೋಗಸ, ಸುಳ್ಳು. ಜನ್ರ ಗಮನ ಬೇರೆಡೆ ಸೆಳೆಯುತ್ತಿದ್ದಾರೆ. ಫೇಲ್ ಆಗಿದ್ದಾರೆ. ಆದ್ರೂ ಬಿಡ್ತಿಲ್ಲ. ಇದು ರಾಜಕೀಯ ಪಿತೂರಿ ಎಂದರು.

# ನಾಳೆ 68ನೇ ಮಹಾಪರಿರ್ವಾಣ ದಿನ

**■ವಿಜಯಸಾಕ್ಷಿ ಸುದ್ದಿ, ಗದಗ**

ಡಿಸೆಂಬರ್ 6 ರಂದು ಡಾ.ಬಿ.ಆರ್.ಅಂಬೇಡ್ಕರ್ ಅವರ 68ನೇ ಮಹಾ ಪರಿನಿರ್ವಾಣ ದಿನವನ್ನು ಬೆಳಿಗ್ಗೆ 10.30 ಗಂಟೆಗೆ ಗದಗ ಬೆಟಗೇರಿ ನಗರಸಭೆಯ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರ ಮೂರ್ತಿಗೆ ಮಾಲಾರ್ಪಣೆ ಮಾಡಿ ನಂತರ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್ ನಲ್ಲಿ ಬೆ 11 ಗಂಟೆಗೆ ಪೂಜಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ಗೌರವಾನ್ವಿತ ಜನಪ್ರತಿನಿಧಿಗಳು, ಜಿಲ್ಲಾ ಮಟ್ಟದ ಅಧಿಕಾರಿಗಳು, ತಾಲೂಕು ಮಟ್ಟದ ಅಧಿಕಾರಿಗಳು, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಹಿಂದುಳಿದ ವರ್ಗ/ ಅಲ್ಪಸಂಖ್ಯಾತ ವರ್ಗಗಳ ಸಮಾಜ ಮುಖಂಡರು, ಸರ್ವಸದಸ್ಯರು, ಗಣ್ಯ ವ್ಯಕ್ತಿಗಳು, ಸಂಘ ಸಂಸ್ಥೆಯ ಪದಾಧಿಕಾರಿಗಳು ಮಹಾಪರಿನಿರ್ವಾಣ ಕಾರ್ಯಕ್ರಮಕ್ಕೆ ಆಗಮಿಸಬೇಕೆಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಂಭಾಲ್‌ಗೆ ಏಕಾಂಗಿಯಾಗಿ ಹೋಗಲು ಸಿದ್ಧ, ಪೊಲೀಸರು ಅನುಮತಿ ನೀಡುತ್ತಿಲ್ಲ: ರಾಹುಲ್ ಗಾಂಧಿ

**■ವಿಜಯಸಾಕ್ಷಿ ಸುದ್ದಿ, ನವದೆಹಲಿ**



ಮಸೀದಿ ಸಮೀಕ್ಷೆ ಸಂಧರ್ಭದಲ್ಲಿ ಹಿಂಸಾಚಾರ ನಡೆದ ಸಂಭಾಲ್‌ಗೆ ತೆರಳುತ್ತಿದ್ದ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಹಾಗೂ ಸಂಸದೆ ಪ್ರಿಯಾಂಕಾ ಗಾಂಧಿ ಅವರನ್ನು ಉತ್ತರ ಪ್ರದೇಶ ಪೊಲೀಸರು ಬುಧವಾರ ಇಲ್ಲಿನ ಗಾಜಿಪುರ ಗಡಿಯಲ್ಲಿ ತಡೆದಿದ್ದಾರೆ.

"ನಾನು ಪೊಲೀಸರೊಂದಿಗೆ ಸಂಭಾಲ್‌ಗೆ ಏಕಾಂಗಿಯಾಗಿ ಹೋಗಲು ಸಿದ್ಧನಿದ್ದೇನೆ. ಆದರೆ, ಅವರು ಅನುಮತಿಸಲಿಲ್ಲ" ಎಂದು ರಾಹುಲ್ ಗಾಂಧಿ ಹೇಳಿದರು.

ರಾಯ್ ಬರೇಲಿ ಸಂಸದ ರಾಹುಲ್ ಗಾಂಧಿ, ಅವರ ಸಹೋದರಿ ಪ್ರಿಯಾಂಕಾ ಗಾಂಧಿ ವಾದ್ರಾ ಮತ್ತು ಇತರ ಹಿರಿಯ ಕಾಂಗ್ರೆಸ್ ನಾಯಕರು ಬೆಳಿಗ್ಗೆ ಘಾಜಿಪುರ ಗಡಿಯನ್ನು ತಲುಪಿದರು. ಅಲ್ಲಿ ಭಾರೀ ಪೊಲೀಸ್ ಪಡೆಗಳನ್ನು ನಿಯೋಜಿಸಲಾಗಿದ್ದು, ಸಂಭಾಲ್‌ಗೆ ಪ್ರವೇಶಿಸುವುದನ್ನು ತಡೆಯಲು ಬ್ಯಾರಿಕೇಡ್‌ಗಳನ್ನು ಹಾಕಲಾಯಿತು. ಹಲವು ಹೊತ್ತಿನ ಮಾತುಕತೆ ಬಳಿಕ ರಾಹುಲ್ ಗಾಂಧಿ ದೆಹಲಿಗೆ ತೆರಳಿದರು.

ನಂತರ ಮಾತನಾಡಿದ ಅವರು, "ನಾವು ಸಂಭಾಲ್‌ಗೆ ಹೋಗಲು ಪ್ರಯತ್ನಿಸುತ್ತಿದ್ದೇವೆ, ಪೊಲೀಸರು ನಿರಾಕರಿಸುತ್ತಿದ್ದು, ನಮಗೆ ಅವಕಾಶ ನೀಡುತ್ತಿಲ್ಲ. ಲೋಕಸಭೆಯ ವಿರೋಧ ಪಕ್ಷದ ನಾಯಕನಾಗಿ ಸ್ಥಳಕ್ಕೆ ಹೋಗುವುದು ನನ್ನ ಹಕ್ಕು.. ನಾನು ಒಬ್ಬನೇ ಹೋಗಲು ಸಿದ್ಧ ಎಂದು ಪೊಲೀಸರೊಂದಿಗೆ ಹೇಳಿದೆ. ಆದರೆ ಅವರು ಅದನ್ನು ಸ್ವೀಕರಿಸಲಿಲ್ಲ" ಎಂದು ರಾಹುಲ್ ಗಾಂಧಿ ಹೇಳಿದರು.

"ಕೆಲವು ದಿನಗಳಲ್ಲಿ ಹಿಂತಿರುಗಿದರೆ, ಅವರು ನಮ್ಮನ್ನು ಬಿಡುತ್ತಾರೆ ಎಂದು ಹೇಳುತ್ತಿದ್ದಾರೆ. ವಾಸ್ತವವಾಗಿ ಇದು ಲೋಕಸಭೆಯ ವಿರೋಧ ಪಕ್ಷದ ನಾಯಕನ ಹಕ್ಕಿಗೆ ವಿರುದ್ಧವಾಗಿದೆ. ನನಗೆ ಹೋಗಲು ಅವಕಾಶ ನೀಡಬೇಕು" ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಕೈಯಲ್ಲಿ ಸಂವಿಧಾನದ ಪ್ರತಿಯನ್ನು ಹಿಡಿದುಕೊಂಡ ಗಾಂಧಿ, ಪೊಲೀಸರ ನಿರ್ಧಾರ ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿದೆ ಎಂದು ಹೇಳಿದರು.

"ನಾವು ಸಂಭಾಲ್‌ಗೆ ಹೋಗಿ ಅಲ್ಲಿ ಏನಾಯಿತು ಎಂಬುದನ್ನು ನೋಡಲು ಬಯಸುತ್ತೇವೆ. ನಾವು ಜನರನ್ನು ಭೇಟಿಯಾಗಲು ಬಯಸುತ್ತೇವೆ. ಆದರೆ, ನನ್ನ ಸಾಂವಿಧಾನಿಕ ಹಕ್ಕನ್ನು ನನಗೆ ಅನುಮತಿಸಲಾಗುತ್ತಿಲ್ಲ. ಸಂವಿಧಾನವನ್ನು ಕೊನೆಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ. ಆದರೆ, ನಾವು ಹೋರಾಟವನ್ನು ಮುಂದುವರಿಸುತ್ತೇವೆ" ಎಂದು ಅವರು ಹೇಳಿದರು.

ವಯನಾಡ್ ಸಂಸದೆ ಪ್ರಿಯಾಂಕಾ ವಾದ್ರಾ ಮಾತನಾಡಿ, "ಸಂಭಾಲ್‌ನಲ್ಲಿ ನಡೆದದ್ದು ತಪ್ಪಾಗಿದೆ.

# ಬಿಜೆಪಿ, ಆರ್‌ಎಸ್‌ಎಸ್ ಸಂವಿಧಾನವನ್ನು ಹರಿದು ಹಾಕುತ್ತಿವೆ : ಮಲ್ಲಿಕಾರ್ಜುನ ಖರ್ಗೆ

**■ವಿಜಯಸಾಕ್ಷಿ ಸುದ್ದಿ, ಉತ್ತರ ಪ್ರದೇಶ**



ಉತ್ತರ ಪ್ರದೇಶದ ಸಂಭಾಲ್‌ನಲ್ಲಿ ನಡೆದ ಹಿಂಸಾಚಾರದಲ್ಲಿ ಸಂತ್ರಸ್ತರನ್ನು ಭೇಟಿಯಾಗಲು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿಗೆ ಅವಕಾಶ ನೀಡದೆ ಬಿಜೆಪಿ ಮತ್ತು ಆರ್‌ಎಸ್‌ಎಸ್ ಸಂವಿಧಾನವನ್ನು ಹರಿದು ಚೂರು ಮಾಡುತ್ತಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬುಧವಾರ ಆರೋಪಿಸಿದ್ದಾರೆ.

ನಿಷೇಧಾಜ್ಞೆ ಜಾರಿಯಲ್ಲಿರುವ ಸಂಭಾಲ್‌ಗೆ ತೆರಳುತ್ತಿದ್ದ ರಾಹುಲ್ ಗಾಂಧಿ ನೇತೃತ್ವದ ಕಾಂಗ್ರೆಸ್ ನಾಯಕರ ನಿಯೋಗವನ್ನು ಘಾಜಿಪುರ ಗಡಿಯಲ್ಲಿ ಉತ್ತರ ಪ್ರದೇಶ ಪೊಲೀಸರು ತಡೆದಿದ್ದರು. ಈ ವೇಳೆ ಪ್ರಿಯಾಂಕಾ ಗಾಂಧಿ ಸೇರಿದಂತೆ ವಿರೋಧ ಪಕ್ಷದ ನಾಯಕರು ದೆಹಲಿ-ಉತ್ತರ ಪ್ರದೇಶ ಗಡಿಯಲ್ಲಿ ಸುಮಾರು ಎರಡು ಗಂಟೆಗಳ ಕಾಲ ತಂಗಿದ್ದು ನಂತರ ದೆಹಲಿಗೆ ಮರಳಿದ್ದಾರೆ.


"ಬಿಜೆಪಿ-ಆರ್‌ಎಸ್‌ಎಸ್ ತನ್ನ ವಿಭಜಕ ಕಾರ್ಯಸೂಚಿಯೊಂದಿಗೆ ಸಂವಿಧಾನವನ್ನು ಹರಿದು ಹಾಕುವಲ್ಲಿ ನಿರತವಾಗಿದೆ. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸಂಭಾಲ್‌ನಲ್ಲಿ ಸಂತ್ರಸ್ತ ಕುಟುಂಬಗಳನ್ನು ಭೇಟಿ ಮಾಡದಂತೆ ತಡೆಯುವುದು ಇದನ್ನೇ ಸಾಬೀತುಪಡಿಸುತ್ತದೆ" ಎಂದು ಮಲ್ಲಿಕಾರ್ಜುನ ಖರ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

"ಎರಡು ಸಮುದಾಯಗಳ ನಡುವೆ ದ್ವೇಷ ಹುಟ್ಟುಹಾಕುವುದು ಬಿಜೆಪಿ-ಆರ್‌ಎಸ್‌ಎಸ್‌ನ ಏಕೈಕ ಸಿದ್ಧಾಂತವಾಗಿದೆ. ಇದಕ್ಕಾಗಿ ಅವರು ಸಂವಿಧಾನವು ಅಂಗೀಕರಿಸಿದ ಪೂಜಾ ಸ್ಥಳಗಳ ಕಾಯಿದೆಯನ್ನು ಹರಿದು ಹಾಕಿದ್ದಲ್ಲದೆ, ಈಗ ಎಲ್ಲೆಡೆ ದ್ವೇಷಕ್ಕಾಗಿ ತಮ್ಮ ಮಾರುಕಟ್ಟೆಯ ಶಾಖೆಗಳನ್ನು ತೆರೆಯುತ್ತಿದ್ದಾರೆ"ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ಡಿ.7, 8ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿನ ಹುದ್ದೆಗಳ ನೇಮಕಾತಿಗೆ ಪರೀಕ್ಷೆ

# ಪರೀಕ್ಷಾ ಕೇಂದ್ರಗಳ ಸುತ್ತ ಪ್ರತಿಬಂಧಕಾಜ್ಞೆ

**■ವಿಜಯಸಾಕ್ಷಿ ಸುದ್ದಿ, ಗದಗ**



ಕರ್ನಾಟಕ ಲೋಕಸೇವಾ ಆಯೋಗವು ಡಿಸೆಂಬರ್ 7 ಮತ್ತು 8ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿನ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಕನ್ನಡ ಭಾಷಾ ಪರೀಕ್ಷೆ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುತ್ತಿದೆ. ಪರೀಕ್ಷಾ ಸಮಯದಲ್ಲಿ ನಕಲು ಮಾಡುವುದು, ಪರೀಕ್ಷಾರ್ಥಿಗಳ ಬದಲು ಬೇರೆಯವರು ಪರೀಕ್ಷೆಗೆ ಹಾಜರಾಗುವುದು ಮುಂತಾದ ಅವ್ಯವಹಾರ ತಡೆಗಟ್ಟಲು ಮತ್ತು ಪರೀಕ್ಷಾ ಕೇಂದ್ರಗಳಲ್ಲಿ ಶಿಸ್ತು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಜಿಲ್ಲೆಯ 23 ಪರೀಕ್ಷಾ ಕೇಂದ್ರಗಳಲ್ಲಿ ಡಿಸೆಂಬರ್ 7ರಂದು ಮಧ್ಯಾಹ್ನ 2 ಗಂಟೆಯಿಂದ 4 ಗಂಟೆಯವರೆಗೆ ಜರುಗುವ ಪರೀಕ್ಷಾ ಕೇಂದ್ರ ಹಾಗೂ ಡಿಸೆಂಬರ್ 8ರಂದು ಬೆಳಿಗ್ಗೆ 10ರಿಂದ 11.30ವರೆಗೆ ಹಾಗೂ ಮಧ್ಯಾಹ್ನ 2ರಿಂದ 4ರವರೆಗೆ ಜರುಗುವ ಪರೀಕ್ಷೆಗಳ 26 ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವನ್ನಾಗಿ ಘೋಷಿಸಿ, ಕೆಳಕಂಡ ನಿರ್ಬಂಧನೆಗಳೊಂದಿಗೆ ಪ್ರತಿಬಂಧಕಾಜ್ಞೆ ಜಾರಿಗೊಳಿಸಲಾಗಿದೆ.

ಪರೀಕ್ಷಾರ್ಥಿಗಳು ಹಾಗೂ ಪರೀಕ್ಷೆಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಹೊರತುಪಡಿಸಿ ಇತರ ಯಾವುದೇ ವ್ಯಕ್ತಿ ಅಥವಾ ಐದು ಐದಕ್ಕಿಂತ ಹೆಚ್ಚು ಜನರು ಗುಂಪು ಕೂಡುವುದು, ಅಥವಾ ವ್ಯಕ್ತಿಗಳ ಗುಂಪುಗಳ ಪ್ರವೇಶವನ್ನು ಹಾಗೂ ಅನಧಿಕೃತ ವ್ಯಕ್ತಿಗಳಿಗೆ ಪರೀಕ್ಷಾ ಕೇಂದ್ರಗಳ ಪ್ರವೇಶವನ್ನು ನಿರ್ಬಂಧಿಸಿದೆ. ಈ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಝರಾಕ್ಸ್ ಅಂಗಡಿ, ಸೈಬರ್ ಸೆಂಟರ್, ಬುಕ್‌ಸ್ಟಾಲ್, ಫೋಟೋ ಕಾಪಿಯರ್‌ಗಳನ್ನು ಬಂದ್ ಮಾಡಲು ಆದೇಶಿಸಿದೆ. ಈ ಪ್ರದೇಶ ವ್ಯಾಪ್ತಿಯಲ್ಲಿ ಪರೀಕ್ಷೆಗಳು ನಡೆಯುವ ಸಮಯದಲ್ಲಿ ಧ್ವನಿವರ್ಧಕಗಳ ಬಳಕೆಯನ್ನು ನಿರ್ಬಂಧಿಸಿದೆ.

ಪರೀಕ್ಷಾ ದಿನಗಳಂದು ಪರೀಕ್ಷಾ ಕೇಂದ್ರಗಳಿಗೆ ವಿದ್ಯಾರ್ಥಿಗಳು ಆಗಮಿಸುವ ಸಮಯ ಮತ್ತು ಹೊರಹೋಗುವ ಸಮಯದಲ್ಲಿ ಮಾತ್ರ ಚಿತ್ರೀಕರಿಸಲು ಮಾಧ್ಯಮದವರಿಗೆ ಅವಕಾಶವಿದ್ದು, ಪರೀಕ್ಷಾ ಗೌಪ್ಯತೆ ದೃಷ್ಟಿಯಿಂದ ಪರೀಕ್ಷಾ ಕೊಠಡಿಗಳಲ್ಲಿ ಪ್ರವೇಶ, ಚಿತ್ರೀಕರಣ ಇತ್ಯಾದಿಗಳನ್ನು ಸಂಪೂರ್ಣವಾಗಿ ನಿಷೇಧಿಸಿದೆ. ಗುರುತು ಪತ್ತೆಹಚ್ಚಲು ಸಾಧ್ಯವಾಗದ ರೀತಿಯಲ್ಲಿ ವಸ್ತ್ರ ಧರಿಸಿ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರದಲ್ಲಿ ಫ್ರಿಸ್ಕಿಂಗ್ ನಡೆಸುವ ಸಿಬ್ಬಂದಿಯೊಂದಿಗೆ ಮತ್ತು ಪರೀಕ್ಷಾ ಕೊಠಡಿಯ ಸಂವೀಕ್ಷಕರೊಂದಿಗೆ ಸಹಕರಿಸಿ ತಪಾಸಣೆಗೊಳಗಾಗುವುದು ಕಡ್ಡಾಯವಾಗಿರುತ್ತದೆ.


ಪರೀಕ್ಷೆಗೆ ಹಾಜರಾಗುವ ಎಲ್ಲಾ ಅಭ್ಯರ್ಥಿಗಳು ಆಯೋಗವು ನಡೆಸುವ ಹ್ಯಾಂಡ್ ಹೆಲ್ಡ್ ಮೆಟಲ್ ಡಿಟೆಕ್ಟರ್ ತಪಾಸಣೆಗೆ ಒಳಗಾಗುವುದು ಕಡ್ಡಾಯ. ಮೆಟಲ್ ವಾಟರ್ ಬಾಟಲ್ಸ್ ಅಥವಾ ನಾನ್ ಟ್ರಾನ್ಸಪರಂಟ್ ವಾಟರ್ ಬಾಟಲ್‌ಗಳನ್ನು ಪರೀಕ್ಷಾ ಕೊಠಡಿಯೊಳಗೆ ತೆಗೆದುಕೊಂಡು ಹೋಗುವುದನ್ನು ನಿಷೇಧಿಸಲಾಗಿದೆ.

ಹೀಯರಿಂಗ್ ಏಡ್ ಉಪಕರಣ ಧರಿಸಿರುವ ಅಭ್ಯರ್ಥಿಗಳು ವೈದ್ಯಕೀಯ ದಾಖಲೆಗಳೊಂದಿಗೆ ಪರೀಕ್ಷೆ ಪ್ರಾರಂಭವಾಗುವ ಎರಡು ಗಂಟೆ ಮುಂಚಿತವಾಗಿ ಸಂಪೂರ್ಣ ತಪಾಸಣೆಗೆ ಒಳಪಡುವುದು ಕಡ್ಡಾಯವಾಗಿರುತ್ತದೆ. ಕರ್ನಾಟಕ ಲೋಕಸೇವಾ ಆಯೋಗವು ಅಭ್ಯರ್ಥಿಗಳ ಪ್ರವೇಶಪತ್ರದಲ್ಲಿ ತಿಳಿಸಿರುವ ವಸ್ತ್ರ ಸಂಹಿತೆಯನ್ನು ಅಭ್ಯರ್ಥಿಗಳ ಕಡ್ಡಾಯವಾಗಿ ಪಾಲಿಸುವುದು. ಎಲ್ಲ ಪರೀಕ್ಷಾ ಸಿಬ್ಬಂದಿ/ಅಭ್ಯರ್ಥಿಗಳು ಮೊಬೈಲ್ ಫೋನ್ ಮತ್ತು ಇತರೇ ಸಂಪರ್ಕ ಸಲಕರಣೆಗಳನ್ನು ತರುವುದನ್ನು ನಿಷೇಧಿಸಲಾಗಿದೆ.

ಮೊಬೈಲ್/ ಸೆಲ್ಯೂಲಾರ್ ಫೋನ್, ಟ್ಯಾಬ್ಲೆಟ್, ಪೆನ್ ಡ್ರೈವ್, ಬ್ಲೂ ಟೂತ್ ಡಿವೈಸ್, ಸ್ಮಾರ್ಟ್ ವಾಚ್, ಕ್ಯಾಲ್ಕುಲೇಟರ್ ಮತ್ತು ಇತರೆ ಯಾವುದೇ ರೀತಿಯ ಎಲೆಕ್ಟ್ರಾನಿಕ್ ಉಪಕರಣಗಳು ಅಥವಾ ಲಾಗ್ ಟೇಬಲ್ಸ್, ಕೈಚೀಲ, ಪರ್ಸ್, ನೋಟುಗಳು, ಚಾರ್ಟ್, ಬಿಡಿ ಹಾಳೆಗಳು ಅಥವಾ ರೆಕಾರ್ಡಿಂಗ್ ವಸ್ತುಗಳನ್ನೂ ಸೇರಿದಂತೆ ಇನ್ನಿತರ ಯಾವುದೇ ರೀತಿಯ ಉಪಕರಣಗಳನ್ನು ಪರೀಕ್ಷಾ ಕೇಂದ್ರದೊಳಗೆ ಕೊಂಡೊಯ್ಯುವುದನ್ನು ನಿಷೇಧಿಸಲಾಗಿದೆ. ಕರ್ನಾಟಕ ಲೋಕಸೇವಾ ಆಯೋಗವು ನಿಗದಿಪಡಿಸಿರುವ ಸೂಚನೆಗಳನ್ನು ಸಂಬಂಧಪಟ್ಟವರು ಪರೀಕ್ಷಾ ಕೇಂದ್ರದಲ್ಲಿ ಕಡ್ಡಾಯವಾಗಿ ಪಾಲಿಸತಕ್ಕದ್ದು ಎಂದು ಜಿಲ್ಲಾ ದಂಡಾಧಿಕಾರಿಗಳೂ ಆಗಿರುವ ಜಿಲ್ಲಾಧಿಕಾರಿ ಗೋವಿಂದರೆಡ್ಡಿ ತಿಳಿಸಿದ್ದಾರೆ.

# ಭಕ್ತ ಕನಕದಾಸರ ಜಯಂತ್ಯುತ್ಸವ ಡಿ.7ಕ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ



ಇಲ್ಲಿನ ತಿಮ್ಮಾಪೂರ ಗ್ರಾಮದಲ್ಲಿ ದಾಸಶ್ರೇಷ್ಠ ಭಕ್ತ ಶ್ರೀ ಕನಕದಾಸರ ಜಯಂತ್ಯುತ್ಸವವನ್ನು ಡಿಸೆಂಬರ್ 7ರಂದು ಆಚರಿಸಲಾಗುವುದು.

ರೋಣ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಎಸ್. ಪಾಟೀಲ್ ಹಾಗೂ ಸಿದ್ದು ಪಾಟೀಲ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಗದಗ ಜಿಲ್ಲಾ ಸಹಾಯ ನಿರ್ದೇಶಕ ವೀರಯ್ಯಸ್ವಾಮಿ ಮತ್ತು ರಾಮಕೃಷ್ಣ ರೊಳ್ಳಿ ಶ್ರೀ ಭಕ್ತ ಕನಕದಾಸರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡುವರು.

ಶ್ರೀ ಚೌಕಿ ಬಸವೇಶ್ವರ ದೇವಸ್ಥಾನದಿಂದ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಸಂಚರಿಸಲಿದೆ.

ಈ ಮೆರವಣಿಗೆಯಲ್ಲಿ ಮಹಿಳೆಯರಿಂದ 101 ಕುಂಭಮೇಳ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರಾಯೋಜಿತ ಕೊಣ್ಣೂರಿನ ಶ್ರೀಚಕ್ರ ಮಹಿಳಾ ಡೊಳ್ಳಿನ ಜನಪದ ಕಲಾ ತಂಡಗಳು ಭಾಗವಹಿಸಲಿವೆ ಎಂದು ಟ್ರಸ್ಟ್ ಕಮಿಟಿ ಪ್ರಕಟಣೆ ತಿಳಿಸಿದೆ.

### ಪಿ.ಕೆ. ಕನ್‌ಸ್ಟ್ರಕ್ಸನ್‌ನಿಂದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಲ್ಯಾಪ್‌ಟಾಪ್ ವಿತರಣೆ

# ಉನ್ನತ ಶಿಕ್ಷಣದಿಂದ ಜೀವನದ ಉನ್ನತಿ

■ವಿಜಯಸಾಕ್ಷಿ ಸುದ್ದಿ, ಗದಗ

ಪ್ರತಿಭೆ ಯಾರ ಸ್ವತ್ತೂ ಅಲ್ಲ, ಸಾಧಕ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗೌರವಿಸಿ ಪ್ರೋತ್ಸಾಹಿಸಬೇಕು. ಉನ್ನತ ಶಿಕ್ಷಣದಿಂದ ಜೀವನ ಉನ್ನತ ಹಂತಕ್ಕೇರುತ್ತದೆ ಎಂದು ರೋಟರಿ ಕ್ಲಬ್‌ನ 3170 ಅಸಿಸ್ಟಂಟ್ ಡಿಸ್ಟ್ರಿಕ್ಟ್ ಗೌರ್ನರ್ ಶಿವಾಚಾರ್ಯ ಹೊಸಳ್ಳಿಮಠ ಅಭಿಪ್ರಾಯಪಟ್ಟರು.

ಅವರು ಬುಧವಾರ ಗದುಗಿನ ಬಸವೇಶ್ವರ ನಗರದ ಪಿ.ಕೆ. ಕನ್‌ಸ್ಟ್ರಕ್ಸನ್ ಪ್ರಾರಂಭೋತ್ಸವದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಕಟ್ಟಡಕಾರ್ಮಿಕನ ಮಗಳಿಗೆ ಉನ್ನತ ಶಿಕ್ಷಣಕ್ಕೆ ಸಹಾಯವಾಗಲು ಲ್ಯಾಪ್‌ಟಾಪ್‌ನ್ನು ಪಿ.ಕೆ. ಕನ್‌ಸ್ಟ್ರಕ್ಸನ್‌ದಿಂದ ಉಡುಗೊರೆಯಾಗಿ ವಿತರಿಸಿ ಮಾತನಾಡಿದರು.

ಬಡತನದಲ್ಲೂ ಕಷ್ಟಪಟ್ಟು ಅಭ್ಯಾಸ ಮಾಡಿ ಪರಿಶ್ರಮದೊಂದಿಗೆ ಉನ್ನತ ಶಿಕ್ಷಣಕ್ಕೆ ಮುಂದಾಗಿರುವ ಈ ವಿದ್ಯಾರ್ಥಿಗಳ ಶೈಕ್ಷಣಿಕ ಅಧ್ಯಯನ ಉತ್ತಮವಾಗಿರಲಿ. ಉತ್ತಮ ಶಿಕ್ಷಣದೊಂದಿಗೆ ಒಳ್ಳೆ ಸಂಸ್ಕೃತಿ, ಸಂಸ್ಕಾರದೊಂದಿಗೆ ಸತ್ಪ್ರಜೆಗಳಾಗಿ ಬಾಳಲಿ ಎಂದರಲ್ಲದೆ, ಪಿ.ಕೆ.ಕನ್‌ಸ್ಟ್ರಕ್ಸನ್ ಪ್ರತಿಭಾನ್ವಿತರಿಗೆ




ಪುರಸ್ಕರಿಸಿ ಪ್ರೋತ್ಸಾಹಿಸಿದ್ದು ಶ್ಲಾಘನೀಯ ಎಂದರು.

ಮುಖ್ಯ ಅತಿಥಿ ಗದಗ-ಬೆಟಗೇರಿ ರೋಟರಿ ಕ್ಲಬ್‌ನ ಅಧ್ಯಕ್ಷ ಡಾ. ರೇವಣಸಿದ್ಧೇಶ್ವರ ಉಪ್ಪಿನ ಮಾತನಾಡಿ, ಸಮಾಜಮುಖಿಯಾಗಿ, ಜನಮುಖಿಯಾಗಿ ಕಾರ್ಯ ಮಾಡುತ್ತಿರುವ ಅಂತಾರಾಷ್ಟ್ರೀಯ ಸೇವಾ ಸಂಸ್ಥೆಯಾಗಿರುವ ರೋಟರಿ ಕ್ಲಬ್ ಶೈಕ್ಷಣಿಕ ಪ್ರಗತಿಯಾಗಿ ತನ್ನದೇ ಆದ ಕೊಡುಗೆ ನೀಡಿದೆ. ಬರಲಿರುವ ದಿನಗಳಲ್ಲಿಯೂ ಈ ಕಾರ್ಯ ಮುಂದುವರೆಯಲಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪಿ.ಕೆ. ಕನ್‌ಸ್ಟ್ರಕ್ಸನ್‌ನ ವ್ಯವಸ್ಥಾಪಕ ನಿರ್ದೇಶಕ ಪ್ರವೀಣಕುಮಾರ ಹಡಪದ, ಇಂದಿನ ಆಧುನಿಕ ದಿನಗಳಲ್ಲಿ ಜನರು ಕಟ್ಟಡ ವಿನ್ಯಾಸ, ವಾಸ್ತು, ಪದ್ಧತಿಗಳಿಗೆ ಮಹತ್ವ ನೀಡುವಂತೆ ವಿದ್ಯಾರ್ಥಿಗಳ ಬದುಕು ಸಹ ಶಿಸ್ತಿನಿಂದ ವಿನ್ಯಾಸಗೊಂಡು ಭವ್ಯ ಭವಿಷ್ಯವನ್ನು ರೂಪಿಸುವ ಶಿಕ್ಷಣ ಪಡೆಯಲು ಸಹ ಜೀವನ ಶೈಲಿಯನ್ನು ವಿನ್ಯಾಸ ಮಾಡಿಕೊಳ್ಳಬೇಕಿದೆ. ಯೋಜಿತ ಜೀವನ ಫಲ ನೀಡಬಲ್ಲದು. ಅಂತಹ ಶಿಸ್ತಿನ ಬದುಕು ವಿದ್ಯಾರ್ಥಿಗಳದ್ದಾಗಲಿ ಎಂದರು.

ಲ್ಯಾಪ್‌ಟಾಪ್, ಸಿ.ಎ. ವ್ಯಾಸಂಗ ಮಾಡುತ್ತಿರುವ ಪ್ರತಿಭಾನ್ವಿತ ವಿದ್ಯಾರ್ಥಿ ಈರಣ್ಣ ಸೂಡಿ, ಅಪೇಕ್ಷಾ, ಅಮೀನಾ, ಪ್ರಭು ಮತ್ತು ಮಹೇಶ ಅವರಿಗೆ ಪ್ರೋತ್ಸಾಹಧನವನ್ನು ಪ್ರತಿಭಾ ಪುರಸ್ಕಾರವಾಗಿ ವಿತರಿಸಲಾಯಿತು.

ವೇದಿಕೆಯ ಮೇಲೆ ರೇಖಾ ಹಾಗೂ ವಸ್ತ್ರದ ಉಪಸ್ಥಿತರಿದ್ದರು. ಕಾವ್ಯಾ ಹಡಪದ, ಅನಸೂಯಾ ಡಂಬಳ ಪ್ರಾರ್ಥಿಸಿದರು. ಮುನ್ನಾ ಕಲ್ಮನಿ ನಿರೂಪಿಸಿ ವಂದಿಸಿದರು. ಸಮಾರಂಭದಲ್ಲಿ ಬಸಪ್ಪ ಹಡಪದ, ಶ್ರೀನಿವಾಸ ದೊಡ್ಡಮನಿ, ಮಹಾಂತೇಶ ದಶಮನಿ, ಲಿಂಗರಾಜ ಚಂದಪ್ಪನವರ, ಅಬ್ದುಲ್‌ಖಾದರ್ ಜಿಲಾನಿ, ಸಾಗರ ಚಂದಪ್ಪನವರ ಮುಂತಾದವರು ಪಾಲ್ಗೊಂಡಿದ್ದರು.

# ವಿದ್ಯಾರ್ಥಿಗಳು ಅವಕಾಶಗಳ ಸದ್ಬಳಕೆ ಮಾಡಿಕೊಳ್ಳಿ



■ವಿಜಯಸಾಕ್ಷಿ ಸುದ್ದಿ, ಮುಳಗುಂದ


ವಿದ್ಯಾರ್ಥಿ ಜೀವನದಲ್ಲಿ ಬಂದ ಅವಕಾಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಟಾಟಾ ಕಂಪನಿಯ ಕ್ರಿಯೇಟಿವ್ ಇಂಜಿನಿಯರ್ ಮಹೇಶ ಬಿರಾದಾರ ಹೇಳಿದರು.

ಅವರು ಪಟ್ಟಣದ ಆರ್. ಎನ್. ದೇಶಪಾಂಡೆ ಸರಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಬಿಎ, ಬಿಕಾಂ ಅಂತಿಮ ವರ್ಷದ ವಿದ್ಯಾರ್ಥಿಗಳಿಇಗೆ ಉದ್ಯೋಗಾವಕಾಶಗಳ ಕುರಿತು ಮಾಹಿತಿ ನೀಡಿ ಮಾತನಾಡಿ, ಇಂದು ಆಧುನಿಕತೆ ಬೆಳೆದಂತೆ ಉದ್ಯೋಗಾವಕಾಶಗಳಿಗೆ ಸಾಕಷ್ಟು ಮಾರ್ಗಗಳಿದ್ದು, ಟಾಟಾ ಟೆಕ್ನಾಲಜಿಸ್‌ಗೆ ಈಗಾಗಲೇ ಈ ಕಾಲೇಜಿನ ವಿದ್ಯಾರ್ಥಿಗಳಿಗೆ ಪ್ರಸ್ತಾವ ಪತ್ರಗಳನ್ನು ನೀಡಲಾಗಿದೆ. ನಿಮ್ಮ ಪದವಿ ಮುಗಿದ ನಂತರ ನಮ್ಮ ಕಚೇರಿಗೆ ಭೇಟಿ ನೀಡಿ ಉದ್ಯೋಗವನ್ನು ಪಡೆದುಕೊಳ್ಳಬೇಕು ಎಂದರು.

ಪ್ರಾಚಾರ್ಯ ಆರ್.ಎಂ. ಕಲ್ಲನಗೌಡರ ಮಾತನಾಡಿ, ಟಾಟಾ ಟೆಕ್ನಾಲಜಿಸ್ ಅವರು ಗ್ರಾಮೀಣ ವಿದ್ಯಾರ್ಥಿಗಳನ್ನು ಪ್ರತಿ ವರ್ಷ ಆಯ್ಕೆ ಮಾಡಿಕೊಂಡು ಉದ್ಯೋಗಾವಕಾಶಗಳನ್ನು ನೀಡುತ್ತಿರುವುದು ಶ್ಲಾಘನೀಯ ಎಂದರು.

ಪ್ರಾಧ್ಯಾಪಕರಾದ ಮಾರುತಿ, ಕೆ.ಎಂ. ಶಿರೂರ, ಅನುಪಮಾ, ಕೆ.ಎನ್. ಕಡೆಮನಿ, ವಿಠಲ ಪವಾರ, ಕೆ.ವಸಂತಕುಮಾರ, ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಇದ್ದರು.

# ಎಮ್.ಎಮ್. ನಿಟ್ಟಾಲಿಯವರಿಗೆ ಸನ್ಮಾನ



■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ನೌಕರರ ಸಂಘದ ಗದಗ ಜಿಲ್ಲಾಧ್ಯಕ್ಷರಾದ ರವಿ ಎಲ್.ಗುಂಜೀಕರ ಬೆಂಬಲಿತ ಅಭ್ಯರ್ಥಿ, ಗದಗ ಜಿಲ್ಲಾ ನೌಕರರ ಸಂಘದ ಜಿಲ್ಲಾ ಖಜಾಂಚಿ ಚುನಾವಣೆಯಲ್ಲಿ ಆಯ್ಕೆಯಾದ ಗದಗ ಜಿಲ್ಲಾ ಪಂಚಾಯತಿ ಮ್ಯಾನೇಜರ್ ಎಮ್.ಎಮ್. ನಿಟ್ಟಾಲಿ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಗದಗ ಜಿಲ್ಲಾ ಬಿಜೆಪಿ ಪ್ರಕೋಷ್ಠಗಳ ಸಹ ಸಂಯೋಜಕ ರಮೇಶ ಎನ್.ಸಜ್ಜಗಾರ, ವಕೀಲರಾದ ಎಸ್.ಎಚ್. ದೊಡ್ಡಮನಿ, ಲಕ್ಷ್ಮಣ ಹುಗ್ಗಿಣ್ಣವರ, ಅಶೋಕ ಹಾದಿ, ಎಸ್.ಎನ್. ಬೀರಕಬ್ಬಿ, ಹುಚ್ಚಪ್ಪ ಸಂದಕದ, ಅಶೋಕ ಕುಡುತನಿ, ಕಾನೂನು ಪ್ರಕೋಷ್ಠದ ಜಿಲ್ಲಾ ಸಂಚಾಲಕ ಕೆ.ಪಿ. ಕೋಟಿಗೌಡ್ರ, ಗ್ರಾಮೀಣ ಮುಖಂಡರಾದ ಬೂದಪ್ಪ ಹಳ್ಳಿ, ವಕೀಲಾರದ ಮಂಜುನಾಥ ಶಾಂತಗೇರಿ, ನಾಗರಾಜ್ ಅಬ್ಬಿಗೇರಿ, ರಾಜು ಹೊಂಗಲ್ ಮುಂತಾದವರು ಉಪಸ್ಥಿತರಿದ್ದರು.

# ಇಂದು ವಿದ್ಯುತ್ ವ್ಯತ್ಯಯ

■ವಿಜಯಸಾಕ್ಷಿ ಸುದ್ದಿ, ಮುಂಡರಗಿ

110 ಕೆ.ವ್ಹಿ ಮುಂಡರಗಿ, ಡಂಬಳ ಮತ್ತು ಶಿಂಗಟಾಲೂರ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಕೈಗೊಳ್ಳುವುದರಿಂದ ಡಿ.5ರಂದು ಮುಂಜಾನೆ 10 ಗಂಟೆಯಿಂದ ಸಾಯಂಕಾಲ 5.30 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುತ್ತದೆ.ಸದರಿ ಉಪಕೇಂದ್ರಗಳಿಂದ ಪೂರೈಕೆಯಾಗುವ 110 ಕೆ.ವ್ಹಿ. ವಿಜಯನಗರ ಶುಗರ್ಸ್, ಬೀಡನಾಳ ನೀರಾವರಿ, 33 ಕೆ.ವ್ಹಿ. ನೀರು ಸರಬರಾಜು ಶಿಂಗಟಾಲೂರ, ಕೆ.ಎನ್.ಎನ್. ಎಲ್, 110 ಕೆ.ವ್ಹಿ. ಎನರ್ಕಾನ ವಿಂಡ್, 110 ಕೆ.ವ್ಹಿ ಸುಜಲಾನ ವಿಂಡ್, 110 ಕೆ.ವ್ಹಿ ಚರ್ಚಿಹಾಳ, ಅಖಿಲಗ್ಯಾ ಸೋಲಾರ್ ಮತ್ತು ಎಲ್ಲಾ ನಗರ, ಕೈಗಾರಿಕಾ, ನೀರಾವರಿ ಪಂಪ್‌ಸೆಟ್‌ಗಳ ಮಾರ್ಗ, ಕುಡಿಯುವ ನೀರು ಮತ್ತು ಗ್ರಾಮೀಣ ಪ್ರದೇಶಗಳ ಎಲ್ಲಾ 11 ಕೆವ್ಹಿ ವಿತರಣಾ ಮಾರ್ಗಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸದರಿ ಪ್ರಕಟಣೆ ಗಮನಿಸಿ ಕಂಪನಿಯೊಂದಿಗೆ ಸಹಕರಿಸಬೇಕಾಗಿ ಪ್ರಕಟಣೆ ವಿನಂತಿಸಿದೆ



ಕೊಪ್ಪಳ ಜಿಲ್ಲಾ 34 ಗಂಗಾ ಕಲ್ಯಾಣ ಯೋಜನೆ ಕೊಳವೆಬಾವಿ ಹಾಗೂ ಗದಗ ಜಿಲ್ಲಾ ಕೊತಬಾಳ, ಸವದಿ, ಮೆಣಸಿಗಿ ಗ್ರಾಮದ 11 ಜನ ಫಲಾನುಭವಿಗಳ ಪಟ್ಟಿಯನ್ನು ಟೆಂಡರ್ ಪ್ರಕ್ರಿಯೆ ಕರೆಯಲಾಗಿದ್ದು, ಈ ಎಲ್ಲ ಫಲಾನುಭವಿಗಳ ರೈತರ ಹೊಲದಲ್ಲಿ ಬೋರ್‌ವೆಲ್ ಹಾಕಿಸಿಕೊಡುವಂತೆ ರಾಣಿ ಚನ್ನಮ್ಮ ಪಾರ್ಟಿಯ ರಾಜ್ಯ ಉಪಾಧ್ಯಕ್ಷ ಪರಸಪ್ಪ ಬಿ.ಗಜ್ಜರಿಯವರು ಬೆಂಗಳೂರಿನ ದೇವರಾಜ್ ಅರಸು ನಿಗಮ ಮಂಡಳಿಯ ಕಚೇರಿಯಲ್ಲಿ ನಿಗಮದ ಅಧ್ಯಕ್ಷರಾದ ಕೀರ್ತಿ ಗಣೇಶ ಎನ್.ಜಿ.ಅವರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದರು.

## ನಿಧನ



ನರೇಗಲ್ಲ: ಪಟ್ಟಣದ ಜಾಡರ ಓಣಿಯ ಬಸಮ್ಮ ಕಳಕಯ್ಯ ಗುಂಡಗೋಪುರಮಠ (102) ಬುಧವಾರ ಬೆಳಿಗ್ಗೆ ನಿಧನರಾದರು. ಮೃತರು ಇಬ್ಬರು ಗಂಡು ಮತ್ತು ಇಬ್ಬರು ಹೆಣ್ಣು ಮಕ್ಕಳು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

### ಕೆಎಲ್‌ಇ ಸೊಸೈಟಿಯ ಕಲಾ, ವಾಣಿಜ್ಯ ಮಹಾವಿದ್ಯಾಲಯದಲ್ಲಿ ಆಹಾರ ಮಹೋತ್ಸವ

# ಸಾವಯವ ಪದ್ಧತಿಯಿಂದ ಉತ್ತಮ ಆರೋಗ್ಯ

■ವಿಜಯಸಾಕ್ಷಿ ಸುದ್ದಿ, ಗದಗ

ಆರೋಗ್ಯಕರ ಮತ್ತು ಸಾವಯವ ಖಾದ್ಯಗಳಿಂದ ಮನೆಯಲ್ಲಿಯೇ ಆಹಾರವನ್ನು ತಯಾರಿಸಿ ಬಡಿಸುತ್ತಿದ್ದರಿಂದ ಸಾಂಪ್ರದಾಯಿಕ ಆಹಾರದ ಪರಿಮಳ ಮುಗಿಲು ಮುಟ್ಟಿತ್ತು. ರಾಗಿ, ನವಣೆಯಂತಹ ಸಾವಯವ ಆಹಾರದಿಂದ ಆಗುವ ಪ್ರಯೋಜನಗಳು ಮತ್ತು ಜಂಕ್ ಫುಡ್‌ನಿಂದಾಗುವ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವ ಈ ಕಾರ್ಯಕ್ರಮ ಪ್ರಮುಖವಾಗಿದೆ ಎಂದು ನಂದಾ ಬಾಳಿಹಳ್ಳಿಮಠ ಅಭಿಪ್ರಾಯಪಟ್ಟರು.

ಇಲ್ಲಿನ ಕೆಎಲ್‌ಇ ಸೊಸೈಟಿಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ವಾಣಿಜ್ಯ ಮತ್ತು ಗೃಹ ವಿಜ್ಞಾನ ವಿಭಾಗದ ವತಿಯಿಂದ ಆಯೋಜಿಸಲಾಗಿದ್ದ ಕರ್ನಾಟಕದ ಸಾಂಪ್ರದಾಯಿಕ ತಿನಿಸುಗಳ ಕುರಿತ ಅಂತರ ಕಾಲೇಜು ಆಹಾರ ಮಹೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.




ಪ್ರಾಂಶುಪಾಲ ಡಾ. ಎ.ಕೆ. ಮಠ ಮಾತನಾಡಿ, ಸಾವಯವ ಪದ್ಧತಿಯು ಆರೋಗ್ಯಕರ ಆಹಾರವನ್ನು ನೀಡುವ ಮೂಲಕ ಗ್ರಾಹಕರಿಗೆ ಆರೋಗ್ಯಕರ ಜೀವನವನ್ನು ಒದಗಿಸುತ್ತದೆ. ನಿರಂತರ ವಿಷಕಾರಿ ಕೀಟನಾಶಕಗಳು, ಸಂಶ್ಲೇಷಿತ ರಸಗೊಬ್ಬರಗಳು ಅಥವಾ ತಳೀಯವಾಗಿ ಮಾರ್ಪಡಿಸಿದ ಜೀವಿಗಳನ್ನು ಉತ್ಪಾದನೆಯಲ್ಲಿ ಬಳಸಲಾಗುವುದಿಲ್ಲ ಮತ್ತು ಪ್ರತಿಜೀವಕಗಳು ಅಥವಾ ಬೆಳವಣಿಗೆಯ ಹಾರ್ಮೋನುಗಳನ್ನು ಜಾನುವಾರುಗಳಿಗೆ ನೀಡಲಾಗುವುದಿಲ್ಲ ಎಂದು ಈ ಪದ್ಧತಿಯು ಭರವಸೆ ಮೂಡಿಸಿದೆ ಎಂದರು.

ಫುಡ್ ಫೆಸ್ಟ್ ಮತ್ತು ಮಾರ್ಕೆಟಿಂಗ್ ಫೆಸ್ಟ್‌ನಲ್ಲಿ ಒಟ್ಟು 26 ತಂಡಗಳು ಭಾಗವಹಿಸಿದ್ದವು. ವಾಣಿಜ್ಯ ವಿಭಾಗದ ಎಚ್‌ಒಡಿ ಪ್ರೊ. ಎಸ್.ಸಿ. ನಿಲುಗಲ್ ಎರಡೂ ಉತ್ಸವಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಲು ಪ್ರೇರಣೆ ಹಾಗೂ ಮಾರ್ಗದರ್ಶನ ನೀಡಿದರು. ವಿಜೇತರಿಗೆ ನಗದು ಬಹುಮಾನವನ್ನು ನೀಡಲಾಯಿತು. ಬಹುಮಾನಗಳನ್ನು ಸುವರ್ಣ ವಸ್ತ್ರದ್, ಪ್ರೇಮಾ ಹಂದಿಗೋಳ್, ಪುಷ್ಪಾ ಭಂಡಾರಿ ಮತ್ತು ಸುಶೀಲ ಕೋಟಿ ಪ್ರಾಯೋಜಿಸಿದ್ದರು.

ಇನ್ನರ್‌ವೀಲ್ ಕ್ಲಬ್ ಅಧ್ಯಕ್ಷೆ ನಾಗರತ್ನ ಮಾರನಬಸರಿ, ಪ್ರೇಮಾ ಮೇಟಿ, ಪ್ರೇಮಾ ಹಂದಿಗೋಳ ತೀರ್ಪುಗಾರ ಸದಸ್ಯರಾಗಿ ಕಾರ್ಯನಿರ್ವಹಿಸಿದರು. ಯುವ ಪೀಳಿಗೆ ಮರೆತು ಹೋಗಿರುವ ಸಾಂಪ್ರದಾಯಿಕ ಖಾದ್ಯಗಳ ತಯಾರಿಕೆಯಲ್ಲಿ ವಿದ್ಯಾರ್ಥಿಗಳು ತೊಡಗಿಸಿಕೊಂಡಿರುವುದನ್ನು ಕಂಡು ಸಂತಸ ವ್ಯಕ್ತಪಡಿಸಿದರು.

ಉಪ ಪ್ರಾಂಶುಪಾಲರಾದ ಡಾ. ವೀಣಾ ಇ ಸಾಚಿದರ್ಭಿಕವಾಗಿ ಮಾತನಾಡಿದರು. ನಂತರ ನಡೆದ ಬಹುಮಾನ ವಿತರಣಾ ಸಮಾರಂಭ ಹಾಗೂ ಸನ್ಮಾನ ಸಮಾರಂಭವನ್ನು ಪ್ರೊ. ಹರ್ಷ ನಿಲುಗಲ್ ನಡೆಸಿಕೊಟ್ಟರು. ಗೃಹ ವಿಜ್ಞಾನ ವಿಭಾಗದ ಎಚ್‌ಒಡಿ ವೀಣಾ ತಿರ್ಲಾಪುರ ವಂದಿಸಿದರು.


### ಕೃಷಿ ಉತ್ಪನ್ನಗಳು, ಬೆಳೆಗಳ ಕೀಟಬಾಧೆ ನಿಯಂತ್ರಣ

# ಕೃಷಿ ಇಲಾಖೆಯಿಂದ ರೈತರಿಗೆ ಸಲಹೆ

■ವಿಜಯಸಾಕ್ಷಿ ಸುದ್ದಿ, ಗದಗ

ರೈತರು ಕಟಾವು ಮಾಡಿದ ಕೃಷಿ ಉತ್ಪನ್ನಗಳನ್ನು ರಾತ್ರಿ ಇಬ್ಬನಿ/ಮಂಜಿನಿಂದ ರಕ್ಷಿಸಲು ಪ್ಲಾಸ್ಟಿಕ್ ಹಾಳೆಗಳಿಂದ ಮುಚ್ಚಲು ಸಲಹೆ ನೀಡಲಾಗಿದೆ. ಜೋಳ ಮತ್ತು ಮೆಕ್ಕೆಜೋಳ ಬೆಳೆಗಳ ಬೆಳವಣಿಗೆ ಹಂತದಲ್ಲಿ ಸೈನಿಕ ಹುಳುವಿನ ನಿಯಂತ್ರಣಕ್ಕಾಗಿ, 2 ಗ್ರಾಂ ಇಮಾಮೆಕ್ಟಿನ ಬೆಂಝೋಯೇಟ ಅಥವಾ 4.0 ಮಿ.ಲೀ. ಫೈನೋಟೆರಾನ್ 10 ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.

ತೊಗರಿ ಬೆಳೆಯಲ್ಲಿ, ಕಾಯಿಕೊರಕ (ಹೆಲಿಕೋವರ್ಪಾ) ನಿರ್ವಹಣೆಗಾಗಿ ಶೇ. 25-50ರಷ್ಟು ಹೂ ಬಿಡುವ ಸಮಯದಲ್ಲಿ ಮತ್ತು ಕಾಯಿ ಬಲಿಯುವ ಹಂತದಲ್ಲಿದ್ದಾಗ ಮೀಟರಿಗೆ 1 ಕೀಡೆ ಅಥವಾ 10 ಗಿಡಗಳಲ್ಲಿ 1 ಕೀಡೆ ಕಂಡು ಬಂದಾಗ ಅಥವಾ ಪ್ರತಿ ಗಿಡದಲ್ಲಿ 2 ತತ್ತಿ ಅಥವಾ ಒಂದು ಕೀಡೆ ಕಾಣಿಸಿಕೊಂಡರೆ ಮೊದಲನೆ ಸಿಂಪರಣೆಯಾಗಿ ತತ್ತಿ ನಾಶಕಗಳಾದ 0.6 ಗ್ರಾಂ. ಥೈಯೋಡಿಕಾರ್ಬ 75 ಡಬ್ಲ್ಯೂ. ಪಿ. ಅಥವಾ 2. ಮಿ.ಲೀ. ಪ್ರೋಪೆನೊಫಾಸ್ 50.



ಇ. ಸಿ. ಅಥವಾ 0.6 ಗ್ರಾಂ ಮಿಥೋಮಿಲ್ 40 ಎಸ್. ಪಿ. ಯನ್ನು ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು.

ಹತ್ತಿ ಬೆಳೆಯಲ್ಲಿ ಮಾಗುವ ಹಂತದಿಂದ ಕಟಾವಿನ ಹಂತವಿದ್ದಾಗ ಗುಲಾಬಿ ಕಾಯಿ ಕೊರಕ ನಿರ್ವಹಣೆಗಾಗಿ 0.5 ಮಿಲೀ ಲ್ಯಾಂಬ್ಡಾಸೈಹ್ಯಾಲೋಥ್ರಿನ್ ಅಥವಾ 0.5 ಮಿಲೀ ಸೈಪರ್ಮೆಥ್ರಿನ್ ಅಥವಾ 05 ಮಿಲೀ ಡೆಕಾಮೆಥ್ರಿನ್ ಸಿಂಪಡಿಸಿ. ಎಕರೆಗೆ 400-500 ಲೀಟರ್ ಸ್ಪ್ರೇ ದ್ರಾವಣವನ್ನು ಬಳಸಬೇಕು.

ಕುಸುಬೆಯಲ್ಲಿ ಬೆಳವಣಿಗೆಯಿಂದ ಹೂವಾಡುವ ಹಂತದಲ್ಲಿ ರಸ ಹೀರುವ ಕೀಟದ ನಿರ್ವಹಣೆಗಾಗಿ 0.2 ಗ್ರಾಂ ಥೈಯಾಮಿಥಾಕ್ಸಾಮ್ 25 ಡಬ್ಲ್ಯೂ.ಜಿ. ಅಥವಾ 1.0 ಗ್ರಾಂ ಅಸಿಫೇಟ್ 75 ಎಸ್.ಪಿ. ಅಥವಾ 1.7 ಮಿ.ಲೀ. ಡೈಮಿಥೋಯೇಟ್ 30 ಇ.ಸಿ. ಪ್ರತಿ ನೀರಿಗೆ ಬೆರೆಸಿ ಸಿಂಪಡಿಸಬೇಕು.

ಕಡಲೆಯಲ್ಲಿ 30-40 ದಿನದ ಬೆಳೆ ಇದ್ದಾಗ ಕುಡಿ ಚಿವುಟುವುದರಿಂದ (ಟಿಪಿಂಗ್) ಇಳುವರಿ ಹೆಚ್ಚಲು ಅನುಕೂಲವಾಗುವುದು. ಚಿಕ್ ಪೀ ಸ್ಪೆಶಲ್ ಅಥವಾ ಪಲ್ಸ್ ಬೂಸ್ಟರ್‌ನ್ನು ಶೇ. 25ರಷ್ಟು ಹೂವಾಡುವ ಸಮಯದಲ್ಲಿ 10ಗ್ರಾಂ./ಲೀನಂತೆ ಬೆಳೆಗೆ ಸಿಂಪರಣೆ ಮಾಡಿದರೆ ಹೆಚ್ಚಿನ ಇಳುವರಿ ಪಡೆಯಲು ಸಹಕಾರಿಯಾಗುತ್ತದೆ. ಬೆಳೆಗಳ ನಿಯಮಿತ ಪರಿವೀಕ್ಷಣೆ ಕೈಗೊಂಡು, ಕಾಲಕಾಲಕ್ಕೆ ಬೇಕಾಗುವ ಸಸ್ಯ ಸಂರಕ್ಷಣಾ ಕ್ರಮಗಳನ್ನು ಹಾಗೂ ಬೆಳೆಗಳಿಗೆ ಬೇಕಾದ ಪೋಷಕಾಂಶ ನಿರ್ವಹಣೆಯನ್ನು ಕೈಗೊಳ್ಳಲು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಗದಗ-ಬೆಟಗೇರಿ: ಇಂದಿನ ನೀರು ಪೂರೈಕೆ ವಿವರ

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ-ಬೆಟಗೇರಿ ಅವಳಿ ನಗರದಲ್ಲಿ ಡಿಸೆಂಬರ್ 5ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು ಎಂದು ನಗರಸಭೆ ಅಧಿಕಾರಿಗಳು ತಿಳಿಸಿದ್ದಾರೆ.

ಸ್ಥಳಗಳ ವಿವರ: ವಾರ್ಡ್ ನಂ. 21, 22 - ವಿಜಯನಗರ ಶಾಲೆ, ಟವರ್ ಕಂಬ, ಕಮತರ ಪ್ಲಾಟ್, ವಾಲ್ಮೀಕಿ ಭವನ, ಕರುಗಲ್ ಲೇಔಟ್, ಶಿಗ್ಗಾವಿ ಲೇಔಟ್ ಉಳಿದ ಕೆಲವು ಭಾಗಗಳು. ವಾರ್ಡ್ ನಂ. 16 - ರಹಮತ್‌ನಗರ, ಕುಷ್ಠ ರೋಗ ಕಾಲೋನಿ, ಕುಂಬಾರ ಓಣಿ, ಮಸೂತಿ ಲೈನ್ ಉಳಿದ ಕೆಲವು ಭಾಗಗಳು.

ವಾರ್ಡ್ ನಂ. 5 - ಶಿವನಾಗನಗರ 4 ಭಾಗಗಳು, ಗಣೇಶನಗರ 4 ಭಾಗಗಳು. ವಾರ್ಡ್ ನಂ. 11, 12 - ಪಿ ಮತ್ತು ಟಿ ಕ್ವಾರ್ಟರ್ಸ್, ಕರಿಯಮ್ಮ ಕಲ್ಲು, ಹನುಮಂತ ದೇವರ ಗುಡಿ, ನಾಗಪ್ಪನ ಕಟ್ಟಿ, ಗಣಪತಿ ಕಟ್ಟಿ, ಚರ್ಚ್ ಭಾಗಗಳು, ಉಳಿದ ಕೆಲವು ಭಾಗಗಳು. ವಾರ್ಡ್ ನಂ. 1 - ಎಸ್ ಎಂ ಕೃಷ್ಣ ನಗರ ಪೂರ್ತಿ ಭಾಗಗಳು. ವಾರ್ಡ್ ನಂ. 30 - 76 ಪ್ಲಾಟ್ ಪೂರ್ತಿ ಭಾಗಗಳು.

ತುಂಗಭದ್ರಾ ನದಿಯಿಂದ ಪೂರೈಕೆ ಮಾಡಿದ ನೀರನ್ನು ಸಂಗ್ರಹಣೆ ಮಾಡಿದ ನಂತರ ಹೊಸ ನೀರು ಸಂಗ್ರಹವಾಗಿರುವುದರಿಂದ ಕಡ್ಡಾಯವಾಗಿ ಕಾಯಿಸಿ ಆರಿಸಿ ಕುಡಿಯಲು ಉಪಯೋಗಿಸತಕ್ಕದ್ದು ಎಂದು ಗದಗ-ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಗ್ರಾಮೀಣಾಭಿವೃದ್ಧಿ-ಪಂಚಾಯತ್ ರಾಜ್ ಇಲಾಖೆ ವಿವಿಧ ಹುದ್ದೆಗಳ ನೇಮಕಾತಿ ಪರೀಕ್ಷೆ | ಸಭೆಯಲ್ಲಿ ಜಿಲ್ಲಾಧಿಕಾರಿ ಗೋವಿಂದರೆಡ್ಡಿ**

# ಪರೀಕ್ಷೆಗಳನ್ನು ಪಾರದರ್ಶಕವಾಗಿ ಜರುಗಿಸಿ

**■ವಿಜಯಸಾಕ್ಷಿ ಸುದ್ದಿ, ಗದಗ**

ಜಿಲ್ಲೆಯಲ್ಲಿ ಡಿಸೆಂಬರ್ 7 ಮತ್ತು 8ರಂದು ಕರ್ನಾಟಕ ಲೋಕಸೇವಾ ಆಯೋಗವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಲ್ಲಿನ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಕನ್ನಡ ಭಾಷಾ ಪರೀಕ್ಷೆ ಮತ್ತು ಸ್ಪರ್ಧಾತ್ಮಕ ಪರೀಕ್ಷೆ ನಡೆಸುತ್ತಿದ್ದು, ಪರೀಕ್ಷೆಗಳನ್ನು ಸುವ್ಯವಸ್ಥಿತವಾಗಿ ಹಾಗೂ ಪಾರದರ್ಶಕವಾಗಿ ಜರುಗಿಸಬೇಕು ಹಾಗೂ ಪರೀಕ್ಷಾ ಅಕ್ರಮಕ್ಕೆ ಅವಕಾಶ ಇಲ್ಲ ಎಂದು ಜಿಲ್ಲಾಧಿಕಾರಿ ಗೋವಿಂದರೆಡ್ಡಿ ನಿರ್ದೇಶನ ನೀಡಿದರು.



ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯ 23 ಪರೀಕ್ಷಾ ಕೇಂದ್ರಗಳಲ್ಲಿ ಡಿಸೆಂಬರ್ 7ರಂದು ಮಧ್ಯಾಹ್ನ 2 ಗಂಟೆಯಿಂದ 4 ಗಂಟೆಯವರೆಗೆ, ಡಿಸೆಂಬರ್ 8ರಂದು ಬೆಳಿಗ್ಗೆ 10 ರಿಂದ 11.30ರವರೆಗೆ ಹಾಗೂ ಮಧ್ಯಾಹ್ನ 2ರಿಂದ 4 ರವರೆಗೆ 26 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ಜರುಗುತ್ತಿದ್ದು, ಪರೀಕ್ಷಾ ಕೇಂದ್ರಗಳಲ್ಲಿ ಗೋಡೆ ಗಡಿಯಾರಗಳು ಇರುವಂತೆ ನೋಡಿಕೊಳ್ಳಬೇಕು. ಪರೀಕ್ಷೆಗಳನ್ನು ಸುಗಮವಾಗಿ ನಡೆಸಲು ಪರೀಕ್ಷಾ ಕೇಂದ್ರಗಳಿಗೆ ವೀಕ್ಷಕರನ್ನು, ಸ್ಥಳೀಯ ನಿರೀಕ್ಷಣಾಧಿಕಾರಿಯನ್ನು, ಮಾರ್ಗಾಧಿಕಾರಿಗಳನ್ನು ಮತ್ತು ತ್ರಿ ಸದಸ್ಯ ಸಮಿತಿಯನ್ನು ನೇಮಿಸಲಾಗಿದೆ. ಅಧಿಕಾರಿಗಳು ತಮಗೆ ನಿಗದಿಪಡಿಸಿದ ಕರ್ತವ್ಯಗಳನ್ನು ನಿರ್ವಹಿಸಬೇಕೆಂದು ಸೂಚಿಸಿದರು.

ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಪರೀಕ್ಷೆ ಪ್ರಾರಂಭವಾಗುವುದಕ್ಕಿಂತ 10 ನಿಮಿಷ ಮುಂಚೆಯೇ ಹಾಜರಾಗಿರಬೇಕು. ಡಿ.7ರಂದು ಪರೀಕ್ಷೆಗಳು ಜರುಗುವ ಪರೀಕ್ಷಾ ಕೇಂದ್ರಗಳಲ್ಲಿನ ಶಾಲೆ-ಕಾಲೇಜುಗಳನ್ನು ಆ ದಿವಸದ ಮಟ್ಟಿಗೆ ರಜೆಯೆಂದು ಘೋಷಿಸಬೇಕು. ಮುಂದಿನ ದಿನಗಳಲ್ಲಿ ಆ ದಿನದ ಅಧ್ಯಯನ ಸರಿದೂಗಿಸಿಕೊಳ್ಳಬೇಕು. ವಿಕಲಚೇತನರಿಗೆ ನೆಲಮಹಡಿಯ ಪರೀಕ್ಷಾ ಕೇಂದ್ರಗಳಲ್ಲಿಯೇ ಪರೀಕ್ಷೆ ಬರೆಯುವ ವ್ಯವಸ್ಥೆಯಾಗಬೇಕು. ಒಟ್ಟಾರೆಯಾಗಿ ಯಾವುದೇ ಅಕ್ರಮ, ಲೋಪ-ದೋಷಗಳಿಗೆ ಆಸ್ಪದವಿಲ್ಲದಂತೆ ಪರೀಕ್ಷೆಯನ್ನು ಯಶಸ್ವಿಯಾಗಿ ಜರುಗಿಸಬೇಕೆಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಪರೀಕ್ಷಾ ಕೇಂದ್ರಗಳಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ಪರಿಮಿತಿಯೊಳಗೆ ಡಿಸೆಂಬರ್ 7 ಮತ್ತು 8ರಂದು ಬೆ 8 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಪ್ರತಿಬಂಧಕಾಜ್ಞೆ ಜಾರಿಗೊಳಿಸಲಾಗಿದೆ. ವಸ್ತ್ರಸಂಹಿತೆಯನ್ನೂ ಜಾರಿಗೊಳಿಸಿದ್ದು, ಶೂ-ಸಾಕ್ಸ್‌ಗಳನ್ನು ಧರಿಸಲು ಅವಕಾಶವಿರುವುದಿಲ್ಲ. ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯೊಳಗೆ ಯಾವುದೇ ಆಧುನಿಕ ಉಪಕರಣಗಳು, ಮೊಬೈಲ್ ಬ್ಲೂಟೂತ್, ಕ್ಯಾಲ್ಕುಲೇಟರ್ ಇತ್ಯಾದಿಗಳನ್ನು ತೆಗೆದುಕೊಂಡು ಹೋಗಲು ಅವಕಾಶ ಇರುವುದಿಲ್ಲ ಎಂದು ತಿಳಿಸಿದರು.

ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್.ಬಿ. ಸಂಕದ ಮಾತನಾಡಿ, ಪರೀಕ್ಷಾ ಕೇಂದ್ರಗಳಲ್ಲಿ ಶಾಂತಿ-ಸುವ್ಯವಸ್ಥೆ, ಪಾರದರ್ಶಕತೆ ಕಾಪಾಡಲು ಪೊಲೀಸ್ ಇಲಾಖೆಯಿಂದ ಸೂಕ್ತ ಬಂದೋಬಸ್ತ್ ಸೇರಿದಂತೆ ಅವಶ್ಯಕ ಕ್ರಮ ಕೈಗೊಳ್ಳಲಾಗುವುದು ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಎಂ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಆರ್.ಎಸ್. ಬುರಡಿ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಎ.ಎ. ಕಂಬಾಳಿಮಠ, ಭೂ ದಾಖಲೆ ಇಲಾಖೆ ಉಪನಿರ್ದೇಶಕ ರುದ್ರಗೌಡ, ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಅಧಿಕಾರಿ ಮಹಾಂತೇಶ, ಪರೀಕ್ಷಾ ಕೇಂದ್ರದ ಮುಖ್ಯಸ್ಥರು, ವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

**ವಿದ್ಯಾರ್ಥಿಗಳಿಂದ 'ಗದಗ ನಗರದ ಪ್ರಾಚೀನ ಶಿಲ್ಪಗಳು ಮತ್ತು ಶಾಸನಗಳು' ವಿಷಯದ ಅಧ್ಯಯನ**

# ಗದಗ ನಗರ ಸಂಸ್ಕೃತಿಯ ಜೀವಾಳ

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ನಗರವು ಶೈವ, ವೈಷ್ಣವ, ಬೌದ್ಧ, ಜೈನ, ವೀರಶೈವ, ಲಿಂಗಾಯತ, ಇಸ್ಲಾಂ, ಕ್ರೈಸ್ತ ಮತ-ಪಂಥಗಳ ಸಾಮರಸ್ಯ ಕೇಂದ್ರವಾಗಿದ್ದು, ಈ ಪ್ರದೇಶದ ಸಂಸ್ಕೃತಿಯ ಜೀವಾಳವಾಗಿರುವ ಆ ಎಲ್ಲ ಮತ-ಪಂಥಗಳ ಅನುಯಾಯಿಗಳು ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಪ್ರಜ್ಞೆ ಹೊಂದಿದ್ದರು. ಅವರಿಗೆ ತಮ್ಮಕ್ಕಷ್ಟೆ ತಾವು ಬಾಳದೆ ಇತರರಿಗಾಗಿಯೂ ಬಾಳಬೇಕೆಂಬ ಅರಿವಿದ್ದಿತು. ಹಾಗಾಗಿಯೇ ಅವರು, ಮನುಷ್ಯರು ಧರ್ಮವನ್ನು ಅವಲಂಬಿಸಿ ಸದ್ಗತಿ ಸಂಪಾದಿಸಿಕೊಳ್ಳಬೇಕು ಎಂಬ ಭಾವನೆಗೆ ಅನುಗುಣವಾಗಿ ನೆಮ್ಮದಿಯಿಂದ ಬಾಳಿದ್ದಾರೆ. ಎಲ್ಲರಿಗೂ ಸಮಾನವಾದ, ಎಲ್ಲ ಧರ್ಮಗಳೂ ಒತ್ತಿ ಹೇಳುವ ಲೋಕಕಲ್ಯಾಣ ಚಟುವಟಿಕೆಗಳನ್ನು ಕೈಗೊಂಡಿದ್ದಾರೆ ಎಂದು ಇತಿಹಾಸ ಪ್ರಾಧ್ಯಾಪಕ ಡಾ. ಅಪ್ಪಣ್ಣ ಹಂಜೆ ಹೇಳಿದರು. ಅವರು ಹುಲಕೋಟಿಯ ಕೆ.ಎಚ್. ಪಾಟೀಲ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಇತಿಹಾಸ ವಿಭಾಗದ 1ನೇ ಸೆಮಿಸ್ಟರ್ ವಿದ್ಯಾರ್ಥಿಗಳು 'ಗದಗ ನಗರದ ಪ್ರಾಚೀನ ಶಿಲ್ಪಗಳು ಮತ್ತು ಶಾಸನಗಳು' ವಿಷಯದ ಅಧ್ಯಯನ ಕೈಗೊಳ್ಳಲು ಗದಗ ನಗರದಲ್ಲಿ ಕ್ಷೇತ್ರಕಾರ್ಯ ಕೈಗೊಂಡಿದ್ದ ಸಂದರ್ಭದಲ್ಲಿ ಮಾತನಾಡುತ್ತಿದ್ದರು.



ಕರ್ನಾಟಕದಲ್ಲಿ 2500 ವರ್ಷಗಳಿಂದ ರೂಢಿಯಲ್ಲಿರುವ ಸಾರ್ಥಕ ಬದುಕಿನ ಅವಶ್ಯ ಗುರಿಗಳಾದ ಸರ್ವಕಾಲ-ಸರ್ವದೇಶಕ್ಕೂ ವ್ಯಾಪಕವಾದ ಸಾರ್ವಕಾಲಿಕ ಆದರ್ಶಗಳು ಮತ್ತು ಯಾವುದೋ ಒಂದು ಕಾಲ-ದೇಶ-ಜನಾಂಗಕ್ಕೆ ಸೀಮಿತವಾದ ಸಮಕಾಲೀನ ಮೌಲ್ಯಗಳು ಶಿಲ್ಪಗಳು ಮತ್ತು ಶಾಸನಗಳಲ್ಲಿ ಅಭಿವ್ಯಕ್ತವಾಗಿರುವಂತೆ ಬೇರಾವ ಮಾಧ್ಯಮಗಳಲ್ಲಿಯೂ ವ್ಯಕ್ತವಾಗಿಲ್ಲ. ಹೀಗಾಗಿ ಶಿಲ್ಪಗಳು ಮತ್ತು ಶಾಸನಗಳ ಸಾಂಸ್ಕೃತಿಕ ಮೌಲ್ಯಗಳ ಉಪೇಕ್ಷೆಯೆಂದರೆ ಅದು ನಮ್ಮ ಜೀವನ ಮೌಲ್ಯಗಳ ಉಪೇಕ್ಷೆ ಮಾಡಿದಂತೆಯೇ ಆಗುತ್ತದೆ. ಇವುಗಳ ಮೂಲಕವೇ ಅಂದಿನ ಪ್ರಭುಗಳು ಮತ್ತು ಪ್ರಜೆಗಳು ಮಾತನಾಡಿದ್ದಾರೆ. ಇವುಗಳಲ್ಲಿ ಅಕ್ಷರ ಮತ್ತು ಉಬ್ಬುಶಿಲ್ಪಗಳ ಮೂಲಕ ತಮ್ಮ ಆದರ್ಶಗಳು ಹಾಗೂ ಮಾನವೀಯ ಜೀವನ ಮೌಲ್ಯಗಳು ಶಾಶ್ವತವಾಗಿ ಉಳಿಯಲಿ, ಸಾಕ್ಷರಸ್ಥರು-ಅನಕ್ಷರಸ್ಥರು ಸೇರಿದಂತೆ ಎಲ್ಲರಿಗೂ ಅರ್ಥವಾಗಲಿ ಎಂಬ ಉದ್ದೇಶದಿಂದ ಆಕರ್ಷಕವಾಗಿ ಚಿತ್ರಿಸಿದ್ದಾರೆ ಎಂದು ಗದಗ ನಗರದ ತ್ರಿಕೂಟೇಶ್ವರ, ಸೋಮೇಶ್ವರ, ವೀರನಾರಾಯಣ ದೇವಾಲಯಗಳಲ್ಲಿ ಮತ್ತು ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿತ ಶಿಲ್ಪಗಳು ಮತ್ತು ಶಾಸನಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿದರು.

ಇತಿಹಾಸ ವಿಭಾಗದ ಪ್ರಾಧ್ಯಾಪಕರಾದ ರೋಹಿಣಿ ರಾಚನ್ನವರ, ಬಸವಂತೆಪ್ಪ ದೊಡ್ಡಮನಿ ವಿದ್ಯಾರ್ಥಿಗಳಿಗೆ ಕ್ಷೇತ್ರಕಾರ್ಯ, ಮಾಹಿತಿ ಸಂಗ್ರಹ, ದಾಖಲೀಕರಣದ ಕುರಿತು ತಿಳಿಸುತ್ತ, ತಮ್ಮ ಗ್ರಾಮದಲ್ಲಿರುವ ಪ್ರಾಚೀನ ಶಿಲ್ಪಗಳು ಮತ್ತು ಶಾಸನಗಳು ತಮ್ಮ ಪೂರ್ವಜರ ಆದರ್ಶಗಳು ಮತ್ತು ಜೀವನ ಮೌಲ್ಯಗಳ ಜೀವಕೋಶಗಳಾಗಿದ್ದು, ಇವುಗಳ ಸಂರಕ್ಷಣೆಯೆಡೆಗೆ ಗಮನ ಹರಿಸಬೇಕೆಂದು ಹೇಳಿದರು.

# ಸೇವಾಕಾರಣದ ಕೊನೆಯ ಕೊಂಡಿ ಡಿ.ಆರ್. ಪಾಟೀಲ

▸▸ಮೊದಲನೇ ಪುಟದಿಂದ



ಗ್ರಂಥ ಬಿಡುಗಡೆಗೊಳಿಸಿ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೆ ಪಿ. ಕೃಷ್ಣ ಮಾತನಾಡಿ, ಲೋಕಸಭೆ ಸದಸ್ಯರ ಪೈಕಿ ಶೇ. 40ರಷ್ಟು ಸಂಸದರು ಕ್ರಿಮಿನಲ್ ಹಿನ್ನೆಲೆ ಹೊಂದಿದ್ದಾರೆ.

ಅಂಥವರಿಗೆ ಡಿ.ಆರ್. ಪಾಟೀಲ ಮಾದರಿಯಾಗಿದ್ದಾರೆ. ಗಾಂಧೀಜಿ ಅವರಿಗೆ ಮಹಾತ್ಮ ಎನ್ನುವ ಬಿರುದು ಕೊಟ್ಟಿದ್ದು ಈ ದೇಶದ ಜನ. ಅದೇ ರೀತಿ ಡಿ.ಆರ್. ಪಾಟೀಲರಿಗೂ ಸಂತ ರಾಜಕಾರಣಿ ಎಂದು ಬಿರುದು ಕೊಟ್ಟಿದ್ದು ಕೂಡ ಜನರೇ. ಡಿ.ಆರ್. ಪಾಟೀಲರ ನಿಸ್ವಾರ್ಥ ಬದುಕು, ಬಡವರ ಪರ ಕಾಳಜಿ ಅನುಕರಣೀಯ ಎಂದರು. ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ಡಿ.ಆರ್. ಪಾಟೀಲರು ಎಂ.ವೈ. ಘೋರ್ಪಡೆ ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದಾಗಿನಿಂದ ಈವರೆಗೂ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆ ಸಂಪೂರ್ಣ ಜಾರಿಗೆ ಬರಬೇಕು ಎಂದು ಒತ್ತಾಯಿಸುತ್ತಾ ಬಂದವರು.

ಅಧಿಕಾರ ಇರಲಿ, ಇಲ್ಲದಿರಲಿ ಪಂಚಾಯತ್ ರಾಜ್ ವ್ಯವಸ್ಥೆ ಬಲಗೊಳ್ಳಬೇಕು ಎನ್ನುವ ಮಹದಾಸೆ ಹೊಂದಿರುವ ಸಂತ ರಾಜಕಾರಣಿ. ಅವರ ಮಾರ್ಗದರ್ಶನದಿಂದ ನಾನು ಗ್ರಾಮೀಣಾಭಿವೃದ್ಧಿ ಸಚಿವನಾಗಿದ್ದ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿಗೆ ನೇರವಾಗಿ ಅನುದಾನ ಒದಗಿಸುವುದು, ಟೆಂಡರ್ ವ್ಯವಸ್ಥೆ ಕಲ್ಪಿಸಿದೆ. ಆದರೆ ಮುಂದೆ ಬಂದ ಸರಕಾರ ಅದನ್ನು ರದ್ದು ಮಾಡಿತು ಎಂದರು.

ಮಾಜಿ ಶಾಸಕ ಡಿ.ಆರ್. ಪಾಟೀಲ ಮಾತನಾಡಿ, ನಾಡಿನ ಮಠಾಧೀಶರು ಒಗ್ಗೂಡಿಕೊಂಡು ಸಮಾಜದಲ್ಲಿ ಒಳ್ಳೆಯವರನ್ನು ರಾಜಕಾರಣಕ್ಕೆ ತರುವ ಪ್ರಯತ್ನ ಮಾಡಬೇಕು. ಇದೇ ಡಿಸೆಂಬರ್ 26-27ರಂದು ಗಾಂಧೀಜಿ ಭೇಟಿಯ ಶತಮಾನೋತ್ಸವ ಆಚರಣೆ ಮಾಡುತ್ತಿದ್ದು, ಆ ಸಂದರ್ಭದಲ್ಲಾದರೂ ಅಧಿಕಾರ ವಿಕೇಂದ್ರಿಕರಣ ಕಾಯಿದೆ ಸಂಪೂರ್ಣ ಜಾರಿಯಾಗಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಎಲ್ಲರೂ ಡಿ.ಆರ್. ಪಾಟೀಲ ತಮ್ಮ ಕ್ಷೇತ್ರವನ್ನು ಎಚ್.ಕೆ. ಪಾಟೀಲರಿಗೆ ತ್ಯಾಗ ಮಾಡಿದ್ದಾರೆ ಎನ್ನುತ್ತಾರೆ. ಆದರೆ ಎಚ್.ಕೆ. ಪಾಟೀಲರ ತ್ಯಾಗವನ್ನು ನೆನಪು ಮಾಡಿಕೊಳ್ಳುವುದಿಲ್ಲ. ಕೆ.ಎಚ್. ಪಾಟೀಲರು ನಿಧನರಾದಾಗ ತಾವೇ ಎಂಎಲ್‌ಎ ಟಿಕೆಟ್ ಪಡೆದು ಚುನಾವಣೆ ನಿಲ್ಲಬಹುದಿತ್ತು. ಆದರೆ ನನಗಾಗಿ ಅವರು ಆ ತ್ಯಾಗ ಮಾಡಿ, ಸ್ವತಃ ದೆಹಲಿಯಿಂದ ಟಿಕೆಟ್ ತಂದು ನನಗೆ ಕೊಟ್ಟರು. ಆ ಪ್ರೀತಿ ವಿಶ್ವಾಸಕ್ಕೆ ಎಷ್ಟು ಕೃತಜ್ಞತೆ ಅರ್ಪಿಸಿದರೂ ಕಡಿಮೆಯೇ ಎಂದು ಡಿ.ಆರ್. ಪಾಟೀಲ ಪ್ರಸ್ತಾಪಿಸುತ್ತಿದ್ದಂತೆ ವೇದಿಕೆಯಲ್ಲಿದ್ದ ಎಚ್.ಕೆ. ಪಾಟೀಲ ಕ್ಷಣಕಾಲ ಭಾವುಕರಾದರು.

ಕಾನೂನು ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವ ಎಚ್.ಕೆ. ಪಾಟೀಲ ಮಾತನಾಡಿ, ತೋಂಟದಾರ್ಯ ಮಠಕ್ಕೂ ನನಗೂ ಅವಿನಾಭಾವ ಸಂಬಂಧ ಬೆಳೆಯಲು ಡಿ.ಆರ್. ಪಾಟೀಲ ಕಾರಣ. ನಾನು ಮೊಟ್ಟ ಮೊದಲ ಬಾರಿಗೆ ವಿಧಾನ ಪರಿಷತ್ ಸದಸ್ಯನಾಗಿದ್ದ ಸಂದರ್ಭದಲ್ಲಿ ಯಡಿಯೂರ ಸಿದ್ಧಲಿಂಗೇಶ್ವರ ಟ್ರಸ್ಟ್ ಸದಸ್ಯನಾಗುವ ಅವಕಾಶ ದೊರೆಯಿತು. ಆಗ ತೋಂಟ-ದಾರ್ಯ ಮಠದ ವಿರುದ್ಧ ಕೆಲಸ ಮಾಡುತ್ತಾರೆ ಎನ್ನುವ ವದಂತಿ ಹರಿದಾಡಿತ್ತು.


ಆದರೆ ಡಿ.ಆರ್. ಪಾಟೀಲರು ಲಿಂ. ಸಿದ್ಧಲಿಂಗ ಶ್ರೀಗಳನ್ನು ಭೇಟಿ ಮಾಡಿಸಿ, ಶ್ರೀಮಠದ ಆಶಯದಂತೆ ಕೆಲಸ ಆಗುವವರೆಗೆ ಮಾತ್ರ ಟ್ರಸ್ಟ್ ಸಕ್ರಿಯ ಸದಸ್ಯನಾಗಿ ಕೆಲಸ ಮಾಡಿದೆ. ಅಂದಿನಿಂದ ಶ್ರೀಗಳು ಮತ್ತು ನನ್ನ ಮಧ್ಯೆ ಅವಿನಾಭಾವ ಸಂಬಂಧ ಏರ್ಪಟ್ಟಿತು. ಆ ಕಾರಣಕ್ಕಾಗಿಯೇ ಇವತ್ತು ಗ್ರಂಥ ಬಿಡುಗಡೆ ಮಾತ್ರವಲ್ಲದೆ, ನಮ್ಮ ಪರಿವಾರದ ಪರಿಚಯ ಸಮಾಜಕ್ಕೆ ಆಗುವಂತಾಯಿತು ಎಂದರು. ತೋಂಟದ ಸಿದ್ಧರಾಮ ಸ್ವಾಮೀಜಿ, ನಿರ್ಭಯಾನಂದ ಸ್ವಾಮೀಜಿ, ಜಗನ್ನಾಥ ಸ್ವಾಮೀಜಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದರು. ರಾಜ್ಯ ಹಣಕಾಸು ಆಯೋಗದ ಅಧ್ಯಕ್ಷ ಸಿ. ನಾರಾಯಣಸ್ವಾಮಿ, ಉಪಸಭಾಪತಿ ರುದ್ರಪ್ಪ ಲಮಾಣಿ, ವಿಧಾನ ಪರಿಷತ್ ಸದಸ್ಯ ಎಸ್.ವಿ. ಸಂಕನೂರ, ಮಾಜಿ ಸಚಿವ ಎಸ್.ಎಸ್. ಪಾಟೀಲ, ಮಾಜಿ ಶಾಸಕರಾದ ಬಿ.ಆರ್. ಯಾವಗಲ್, ಜಿ.ಎಸ್. ಗಡ್ಡದೇವರಮಠ, ರಾಮಣ್ಣ ಲಮಾಣಿ, ಮಾಜಿ ಸಂಸದ ಪ್ರೊ. ಐ.ಜಿ. ಸನದಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಚಿ, ಪ್ರೊ. ಬಿ.ಎಫ್. ದಂಡಿನ, ಸತೀಶ ಕಾಡಶೆಟ್ಟಿ, ಆರ್.ರಫು, ನರೇಂದ್ರ ಎನ್.ಸಿ., ಜಿ.ಬಿ. ಶಿವರಾಜ ಇತರರು ಉಪಸ್ಥಿತರಿದ್ದರು.

ಶ್ರೀಮಠದ ಆಡಳಿತಾಧಿಕಾರಿ ಎಸ್.ಎಸ್. ಪಟ್ಟಣಶೆಟ್ಟರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮಾರಂಭದಲ್ಲಿ ಗ್ರಂಥಕರ್ತ ಜೆ.ಕೆ. ಜಮಾದಾರ, ಡಿ.ಆರ್. ಪಾಟೀಲ, ಎಂ.ಆರ್. ಪಾಟೀಲ, ಪಿ.ಕೆ. ಪಾಟೀಲ ದಂಪತಿಯನ್ನು ಸನ್ಮಾನಿಸಲಾಯಿತು.

## ವೀಕ್ಷಕ, ನಿರೀಕ್ಷಣಾಧಿಕಾರಿ, ಮಾರ್ಗಾಧಿಕಾರಿ, ತ್ರಿಸದಸ್ಯ ಸಮಿತಿ ನೇಮಕ

**■ವಿಜಯಸಾಕ್ಷಿ ಸುದ್ದಿ, ಗದಗ**

ಕರ್ನಾಟಕ ಲೋಕಸೇವಾ ಆಯೋಗವು ಡಿಸೆಂಬರ್ 7 ಮತ್ತು 8 ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿನ ಹುದ್ದೆಗಳ ನೇಮಕಾತಿಗೆ ಕನ್ನಡ ಭಾಷಾ ಪರೀಕ್ಷೆ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುತ್ತಿದೆ. ಈ ಪರೀಕ್ಷೆಗಳು ಸುಗಮವಾಗಿ ಮತ್ತು ವ್ಯವಸ್ಥಿತವಾಗಿ ನಡೆಸಲು ಪರೀಕ್ಷಾ ಕೇಂದ್ರಗಳಿಗೆ ವೀಕ್ಷಕರನ್ನು, ಸ್ಥಳೀಯ ನಿರೀಕ್ಷಣಾಧಿಕಾರಿಯನ್ನು, ಮಾರ್ಗಾಧಿಕಾರಿಗಳನ್ನು ಮತ್ತು ತ್ರಿ ಸದಸ್ಯ ಸಮಿತಿಯನ್ನು ನೇಮಿಸಲಾಗಿದೆ. ಅಧಿಕಾರಿಗಳು ತಮಗೆ ನಿಗದಿಪಡಿಸಿದ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಎಂದು ಜಿಲ್ಲಾಧಿಕಾರಿ ಗೋವಿಂದರೆಡ್ಡಿ ತಿಳಿಸಿದ್ದಾರೆ.



ಗದಗ ಜಿಲ್ಲಾಡಳಿತ ಹಾಗೂ ನಗರಾಭಿವೃದ್ಧಿ ಕೋಶ, ಪೌರಾಡಳಿತ ಇಲಾಖೆ ವತಿಯಿಂದ ಮುಳಗುಂದ ಪಟ್ಟಣ ಪಂಚಾಯಿತಿ ಆಸ್ತಿ ತೆರಿಗೆ ವಸೂಲಾತಿಯಲ್ಲಿ ಬಾಕಿ ಇರುವ ಆಸ್ತಿ ತೆರಿಗೆ ವಸೂಲಾತಿಯಲ್ಲಿ ಶೇ.100ರಷ್ಟು ಪ್ರಗತಿಯನ್ನು ಸಾಧಿಸಿದ್ದು, ಜಿಲ್ಲಾಡಳಿತದ ವತಿಯಿಂದ ಜಿಲ್ಲಾಧಿಕಾರಿ ಗೋವಿಂದರೆಡ್ಡಿಯವರು ಪ್ರಶಂಸಾ ಪತ್ರವನ್ನು ಪ.ಪಂ ಮುಖ್ಯಾಧಿಕಾರಿ ಮಂಜುನಾಥ ಗುಳೆದ ಅವರಿಗೆ ನೀಡಿ ಅಭಿನಂದಿಸಿದರು.

# ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ-ಬೆಟಗೇರಿ ನಗರಸಭೆ ವ್ಯಾಪ್ತಿಯ 23ನೇ ವಾರ್ಡಿನಲ್ಲಿ ನಗರಸಭೆಯ ಸದಸ್ಯ ಜನಾಬ ಬರಕತಅಲಿ ಮುಲ್ಲಾ ವಾರ್ಡಿನ ಒಕ್ಕಲಗೇರಿ ಓಣಿಯ ದೇಸಾಯಿ ಪ್ಲಾಟ್‌ನ ಕರಬಿಷ್ಟಿ ಫ್ಯಾಕ್ಟರಿಯಿಂದ ಪುರದರವರ ಮನೆಯವರೆಗಿನ ಸಿ.ಸಿ ರಸ್ತೆ ನಿರ್ಮಾಣ ಕಾಮಗಾರಿಗಳಿಗೆ ಚಾಲನೆ ನೀಡಿದರು.



ಈ ಸಂಧರ್ಭದಲ್ಲಿ ಮಾತನಾಡಿದ ವಾರ್ಡಿನ ಮುಖಂಡ ಬಸಪ್ಪ ಗುಗ್ಗರಿ, ವಾರ್ಡಿನ ನಾಗರಿಕರಿಗೆ ಅಗತ್ಯವಾಗಿರುವ ಮೂಲಭೂತ ಸೌಕರ್ಯಗಳಾದ ನೀರಿನ ವ್ಯವಸ್ಥೆ, ಬೀದಿ ದೀಪಗಳ ನಿರ್ವಹಣೆ, ರಸ್ತೆಗಳಲ್ಲಿ ಅಗತ್ಯವಿರುವ ಫೆವರ್ಸ್ ಅಳವಡಿಕೆ ಹಾಗೂ ಶೌಚಾಲಯ ವ್ಯವಸ್ಥೆ ಸ್ಥಿರಿದಂತೆ ಅನೇಕ ಕಾಮಗಾರಿಗಳಿಗೆ ಜನಾಬ ಬರಕತಅಲಿ ಮುಲ್ಲಾರವರು ಚಾಲನೆ ನೀಡಿ ಅಭಿವೃದ್ಧಿಪಡಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂಧರ್ಭದಲ್ಲಿ ಒಕ್ಕಲಗೇರಿ ಓಣಿಯ ಹಿರಿಯರಾದ ನಾಗಪ್ಪ ಗುಗ್ಗರಿ, ಮುತ್ತಣ್ಣ ರೋಣದ, ಚಂದ್ರಶೇಖರಪ್ಪ ಪುರದ, ಬಸವರಾಜ ಹತ್ತಿಶೆಟ್ಟರ, ಕಾಂಗ್ರೆಸ್ ಮುಖಂಡರಾದ ಜನಾಬ ಎಚ್. ಕೆ. ಮುಲ್ಲಾ, ವಕೀಲ, ಸಾಮಾಜಿಕ ಕಾರ್ಯಕರ್ತ ರಾಘವೇಂದ್ರ ಪಾಲನಕರ, ಜಗದೀಶ ಗೌಡರ, ಮಂಜುನಾಥ ನಲವಡಿ, ಖಾದರ ಕಿರೆಸೂರ, ಆಸಿಫ್ ಅಲಿ ಮುಲ್ಲಾ, ಎಮ್.ಎಮ್. ಕಾಗದಗಾರ, ಶಂಕರಪ್ಪ ಸತ್ಯಪ್ಪನವರ, ಪ್ರಕಾಶ ಕಂಠಿ, ಈರಣ್ಣ ಕರಬಿಷ್ಟಿ, ಖಾದರ ಕಿರೆಸೂರ್, ಹನಮಂತಪ್ಪ ಜಕ್ಕಲಿ, ಸಿದ್ದಲಿಂಗಪ್ಪ ತುರಕಾಣಿ, ಶೇಕಪ್ಪ ತುಪ್ಪದ, ದಾವೂದ ಡೋಲಿ, ಈಶ್ವರಪ್ಪ ಕ್ಯಾಡದ, ಮದಿವಾಳಪ್ಪ ಕಮತರ, ಸತೀಶ ತಡಸದ, ಗೋವಿಂದಪ್ಪ ನಾಗರಾಳ, ಜಗದೀಶ ಸೂರಪ್ಪಗೌಡರ, ಮಹಾಂತೇಶ ನಾಗರಾಳ, ಶಂಕರ ಕರಿಬಿಷ್ಟಿ, ಪ್ರಕಾಶ ಖೋಡೆ ಮುಂತಾದವರಿದ್ದರು.


ಕರ್ನಾಟಕ ಸರಕಾರ

## ಗ್ರಾಮ ಪಂಚಾಯತ ಕಾರ್ಯಾಲಯ ಬೆಳದಡಿ

ತಾಲೂಕ : ಗದಗ e-mail : beladadi.gag.gdg@gmail.com ಜಿಲ್ಲಾ : ಗದಗ

ನಂ: ಗ್ರಾ.ಪಂ ಬೆಳದಡಿ/ಟೆಂಡರ/2024-25/ ದಿನಾಂಕ: 04-12-2024

**ಕೆಪಿಪಿ ಪೋರ್ಟಲ್ ಟೆಂಡರ ಪ್ರಕಟಣೆ (ದ್ವಿ- ಲಕೋಟಿ)**

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್-2000 ನಿಯಮದಂತೆ ನಿಯಮಗಳನ್ವಯ ಅರ್ಹ ಗುತ್ತಿಗೇದಾರ/ ಸರಬರಾಜುದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ 01 ಕಾಮಗಾರಿಯ ಗುಣಮಟ್ಟದ ಸಾಮಗ್ರಿ ಪೂರೈಕೆಯ ಟೆಂಡರನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ: 2024-25ನೇ ಸಾಲಿನ MGNREGA ಯೋಜನೆ ಅಡಿ ಟೆಂಡರನ್ನು ಆಹ್ವಾನಿಸಲಾಗಿದೆ. ಗುತ್ತಿಗೆದಾರ/ಸರಬರಾಜುದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆಗಳು ಈ ಕೆಳಗಿನಂತೆ ಇರುತ್ತವೆ.

| ಕ್ರ.ಸಂ. | ಇಂಡೆಂಟ್ ನಂಬರ | ಟೆಂಡರಿಗಿಟ್ಟ ಮೊತ್ತ |
|---|---|---|
| 1 | RDPR/2024-25/IND5942 | ರೂ.5,26,725.30 |

**ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ :** ಅರ್ಜಿ ಬೆಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಂತೆ, ಇ.ಎಂ.ಡಿ. ಸಂಬಂದಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.

ಇ-ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್-ಬಿ ಯನ್ನು ವೆಬ್‌ಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ: 05-12-2024 ರಿಂದ 12-12-2024 ರಂದು 16.30 ಗಂಟೆಯವರೆಗೆ. ತಾಂತ್ರಿಕ ಬಿಡ್ ಟೆಂಡರ ತೆರೆಯುವ ದಿನಾಂಕ: 13-12-2024 ರಂದು 11.30 ಗಂಟೆಗೆ ಆರ್ಥಿಕ ಬಿಡ್ ದಿ: 16-12-2024ರಂದು 16.30 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ-
ಪಂಚಾಯತ ಅಭಿವೃದ್ಧಿ ಅಧಿಕಾರಿಗಳು
ಗ್ರಾಮ ಪಂಚಾಯತ ಬೆಳದಡಿ



ಕರ್ನಾಟಕ ಸರಕಾರ

## ಗ್ರಾಮ ಪಂಚಾಯತ ಕಾರ್ಯಾಲಯ ಬೆಳವಣಕಿ

ತಾ॥ರೋಣ ಇ-ಮೇಲ್ ವಿಳಾಸ- belavanaki.ron.gdg@gmail.com ಜಿ॥ಗದಗ

ಗ್ರಾ.ಪಂ /ಬೆ/ನರೇಗಾ/2024-25 ದಿನಾಂಕ : 04-12-2024

**ದರಪಟ್ಟಿ ಪ್ರಕಟಣೆ**

2024-25ನೇ ಸಾಲಿನಲ್ಲಿ ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಅನುಷ್ಠಾನಗೊಳ್ಳುವ ಈ ಕೆಳಕಂಡ ಕಾಮಗಾರಿಗಳಿಗೆ ವಿವಿಧ ರೀತಿಯ ಸಾಮಗ್ರಿಗಳನ್ನು ಸಂಗ್ರಹಿಸುವ ಸಂಬಂಧ ದರಪಟ್ಟಿ ಆಹ್ವಾನಿಸಲಾಗಿದೆ. ಇದರ ಪ್ರಯುಕ್ತ ಜಿಲ್ಲಾ ಡಿ ಪಿ ಸಿ ಲಾಗಿನ್‌ನಲ್ಲಿ ನೋಂದಾಯಿಸಿ ಆಸಕ್ತ ಸರಬರಾಜುದಾರರು ದರಪಟ್ಟಿಯನ್ನು ಸಲ್ಲಿಸಬಹುದಾಗಿದ್ದು, ವಿವರ ಮತ್ತು ವೇಳಾಪಟ್ಟಿ ಈ ಕೆಳಗಿನಂತಿದೆ.

| ಕ್ರ ಸಂ | ಕಾಮಗಾರಿಯ ಹೆಸರು | ಕಾಂಗಾರಿಯ ಅಂದಾಜು ಮೊತ್ತ(ಲಕ್ಷಗಳಲ್ಲಿ) | ಕಾಮಗಾರಿಗಳಿಗೆ ಪೋರೈಸಬೇಕಾಗ ಸಾಮಗ್ರಿ ಮೊತ್ತ |
|---|---|---|---|
| 1 | ಬೆಳವಣಕಿ ಗ್ರಾಮದ ಗಂಗಾಧರ ಮನೆಯಿಂದ ಚರೇದರವರ ಮನೆಯವರೆಗೆ ಸಿ ಸಿ ರಸ್ತೆ ನಿರ್ಮಾಣ1514004003/RC/93393042892412324 | 2.00 | 1.209 |
| 2 | ಬೆಳವಣಕಿ ಗ್ರಾಮದ ಹೂಗಾರ (ಜೀರ) ಮನೆಯಿಂದ ನಾಗನೂರ ಮನೆಯವರೆಗೆ ಸಿ ಸಿ ರಸ್ತೆ ನಿರ್ಮಾಣ (1514004003/RC/93393042892414769 | 2.00 | 1.131 |
| 3 | ಬೆಳವಣಕಿ ಗ್ರಾಮದ ತಟ್ಟೆಯವರ ಸಂದಿಯಿಂದ ಲಕ್ಷ್ಮೀದೇವಿಗುಡಿಯವರೆಗೆ ಸಿ ಸಿ ರಸ್ತೆ ನಿರ್ಮಾಣ (1514004003/RC/93393042892415768) | 2.00 | 1.363 |
| 4 | ಬೆಳವಣಕಿ ಗ್ರಾಮದ ಹಡ್ಲಿಯವರ ಮನೆಯಿಂದ ನವಲಗುಂದ ಇವರ ಮನೆಯವರೆಗೆ ಸಿ ಸಿ ರಸ್ತೆ ನಿರ್ಮಾಣ (1514004003/RC/93393042892396594) | 4.00 | 2.767 |
| 5 | ಬೆಳವಣಕಿ ಗ್ರಾಮದ ನೀಲಗುಂದ ಇವರ ಹಿತ್ತಲದಿಂದ ಚಂದಪ್ಪ ಯತ್ನಟ್ಟಿ ಮನೆಯವರೆಗೆ ಸಿ ಸಿ ಗಟಾರ ನಿರ್ಮಾಣ (1514004003/FP/GIS/808908) | 3.00 | 1.826 |
| 6 | ಬೆಳವಣಕಿ ಗ್ರಾಮದ ಅಂಗಡಿಯವರ ಮನೆಯಿಂದ ಶರಣಪ್ಪ ಹಡ್ಲಿಯವರ ಮನೆಯವರೆಗೆ ಬಾಕ್ಸಚರಂಡಿ ನಿರ್ಮಾಣ (1514004003/FP/GIS/808918) | 3.00 | 1.822 |
| 7 | ಬೆಳವಣಕಿ ಗ್ರಾಮದ ಚಂದಪ್ಪ ಯತ್ನಟ್ಟಿಯವರ ಮನೆಯಿಂದ ಶೈಲಾ ತಟ್ಟೆಯವರ ಸಂದಿಯವರೆಗೆ ಸಿ ಸಿ ಗಟಾರ ನಿರ್ಮಾಣ (1514004003/FP/GIS/808896) | 3.00 | 2.434 |
| 8 | ಬೆಳವಣಕಿ ಗ್ರಾಮದ ಚಳಮಲಿ ದಾರಿಯ ಹತ್ತೀರ ಸಿ ಡಿ ನಿರ್ಮಾಣ (1514004003/FP/93393042892312097) | 0.75 | 0.469 |

1) ದರಪಟ್ಟಿ ಅವಧಿ ದಿನಾಂಕ: 05-12-2024 ರಿಂದ ದಿನಾಂಕ: 12-12-2024 ರ ವರೆಗೆ
2) ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 13-12-2024 ರ ಮಧ್ಯಾಹ್ನ 12-30 ಘಂಟೆಯವರೆಗೆ
3) ದರಪಟ್ಟಿ ತೆರೆಯುವ ದಿನಾಂಕ: 13-12-2024 ಮಧ್ಯಾಹ್ನ 12-30 ಗಂಟೆಯ ನಂತರ
4) ಅರ್ಜಿ ಸಲ್ಲಿಸುವ ಆಸಕ್ತ ನೋಂದಾಯಿತರು ಪ್ರತ್ಯೇಕವಾಗಿ ದರಪಟ್ಟಿಗಳನ್ನು ಸಲ್ಲಿಸತಕ್ಕದ್ದು
5) ಷರತ್ತಗಳು ಮತ್ತು ಸಾಮಗ್ರಿ ವಿವರ ಮತ್ತು ಇತರೆ ವಿಷಯಗಳ ಮಾಹಿತಿಗಾಗಿ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತ ಕಾರ್ಯಾಲಯ ಇವರನ್ನು ಕಛೇರಿ ಸಮಯದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ ಆಗಿದೆ/-
**ಅಧ್ಯಕ್ಷರು**
ಗ್ರಾಮ ಪಂಚಾಯತ ಬೆಳವಣಕಿ

ಸಹಿ ಆಗಿದೆ/-
**ಪಂಚಾಯತ ಅಭಿವೃದ್ಧಿ ಅಧಿಕಾರಿಗಳು**
ಗ್ರಾಮ ಪಂಚಾಯತ ಬೆಳವಣಕಿ


VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka